# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 141 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 04.12.2024 • ಬುಧವಾರ • ಪುಟ:04 • ಬೆಲೆ:2
Volume:02 • Issue: 141 • PRGI No:KARKAN/2023/88055 • VIJAYANAGARA • 04.12.2024 • Wednesday • Page:04 • Rs:2



BOOK YOUR ADVERTISEMENTS
TO REACH MORE READERS
1,00,000+
Digital E-PAPER READERS
M: 94486 33038
Book Advance Get More Benefits
No.1 HAMPI TIMES LEADING VIJAYANAGARA District News Paper




## ಮೈಕ್ರೋ ನ್ಯೂಸ್

### ಡಿ. 6 ರಂದು ಕತ್ತೆಗಳ ಬಹಿರಂಗ ಹರಾಜು

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ಪೊಲೀಸ್ ಠಾಣೆಯ ಪ್ರಕರಣ ಒಂದರಲ್ಲಿ ಮರಿ ಮತ್ತು ಹಾಲುಕೊಡುವ ಕತ್ತೆಗಳು ಸೇರಿ ಒಟ್ಟು 46 ಕತ್ತೆಗಳು ಜಪ್ತಿಯಾಗಿದ್ದು, ಅವುಗಳನ್ನು ಡಿಸೆಂಬರ್ 6 ರಂದು ಬೆಳಗ್ಗೆ 10 ಗಂಟೆಗೆ ಮಲಪನಗುಡಿ ರಸ್ತೆಯಲ್ಲಿರುವ ಹೆಚ್‌ಎಲ್‌ಸಿ ಕಾಲುವೆ ಪಕ್ಕದಲ್ಲಿನ ಅಂಜಿನಪ್ಪ ರವರ ಕಬ್ಬಿನ ಹೊಲದಲ್ಲಿ ಸಾರ್ವಜನಿಕ ಬಹಿರಂಗ ಹಾರಾಜು ಹಮ್ಮಿಕೊಳ್ಳಲಾಗಿದೆ. ಕತ್ತೆಗಳನ್ನು ಖರೀದಿಸುವ ಆಸಕ್ತಿಯುಳ್ಳವರು ಭಾಗವಹಿಸಬಹುದು. ಎಂದು ಕಲಬುರಗಿಯ ಸಿಐಯು, ಸಿಐಡಿಯ ಡಿ.ಎಸ್.ಪಿ. ಎಸ್.ಅಸ್ಲಾಂ ಭಾಷ ತಿಳಿಸಿದ್ದಾರೆ.

### ಡ್ರೋನ್ ತರಬೇತಿಗಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಪ್ರಸಕ್ತ ಸಾಲಿಗೆ ಡ್ರೋನ್ ಆಧಾರಿತ ಫೋಟೋಗ್ರಫಿ ಮತ್ತು ವಿಡಿಯೋಗ್ರಫಿ ಮೂಲಕ ಸಾಮಾಜಿಕ ಜಾಲತಾಣಗಳಲ್ಲಿ ಉದ್ಯೋಗ ಪಡೆಯಲು ಇಚ್ಛಿಸುವ ಪರಿಶಿಷ್ಟ ಪಂಗಡದ ಯುವಕ ಮತ್ತು ಯುವತಿಯರಿಗೆ ಉಚಿತವಾಗಿ ತರಬೇತಿ ನೀಡಲಾಗುತ್ತಿದ್ದು, ಆಸಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ತಾಲ್ಲೂಕು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಕಲ್ಯಾಣಧಿಕಾರಿಗಳ ಕಚೇರಿ, ವಾಲ್ಮೀಕಿ ಭವನ, ನಲ್ಲಚೆರುವು, ಇಲ್ಲಿ ಪಡೆದು ಭರ್ತಿ ಮಾಡಿ ಇದೇ ಕಚೇರಿಗೆ ಡಿ.10 ರೊಳಗೆ ಸಲ್ಲಿಸಬೇಕು ಎಂದು ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

ಉಜ್ಜಯಿನಿ ಸದ್ಧರ್ಮಪೀಠದ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿ ಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿಕೆ

# ಪಂಚಾಚಾರ್ಯರ ಯುಗಮಾನೋತ್ಸವ

## ಮಾ.18 ರಿಂದ ಏ.3ರವರೆಗೆ ಅದ್ಧೂರಿ ಆಯೋಜನೆ। ಶಿವಾಚಾರ್ಯರರ ಸಂಗಮ



**ಹಂಪಿ ಟೈಮ್ಸ್ ಕೊಟ್ಟೂರು**

ಮುಂಬರುವ ಮಾರ್ಚ18 ರಿಂದ ಏಪ್ರಿಲ್ 3ವರೆಗೆ 15 ದಿನಗಳ ಕಾಲ ಪಟ್ಟಣದ ಡೋಣೂರು ಚಾನುಕೋಟಿ ಮಠದ ಪೀಠಾಧ್ಯಕ್ಷರು ಡಾ.ಸಿದ್ದಲಿಂಗ ಶಿವಾಚಾರ್ಯರ ಷಷ್ಠಾಬ್ದಿ ಕಾರ್ಯಕ್ರಮ ಹಾಗೂ ಪಂಚಾಚಾರ್ಯರ ಯುಗಮಾನೋತ್ಸವವು ಅದ್ದೂರಿಯಾಗಿ ನಡೆಯಲಿದೆ ಎಂದು ಉಜ್ಜಯನಿ ಸದ್ಧರ್ಮ ಪೀಠದ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿ ಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಪಟ್ಟಣದ ಡೋಣೂರು ಚಾನುಕೋಟಿ ಮಠದ ಆಶ್ರಮದಲ್ಲಿ ಸೋಮವಾರ ಸಂಜೆ ನಡೆದ ಕಾರ್ಯಕ್ರಮದ ಪೂರ್ವಭಾವಿ ಸಭೆ ಸಾನಿಧ್ಯವಹಿಸಿ ಮಾತನಾಡಿದ ಉಜ್ಜಿನಿ ಶ್ರೀಗಳು, ಈ ಭಾಗದಲ್ಲಿ ಪಂಚಾಚಾರ್ಯರ ಯುಗಮಾನೋತ್ಸವ ಇದೇ ಪ್ರಥಮ ಬಾರಿಗೆ ನಡೆಯಲಿದ್ದು, ದೇಶದ ಮೂಲೆ ಮೂಲೆಗಳಿಂದ ಶಿವಾಚಾರ್ಯರು ಆಗಮಿಸಲಿದ್ದು, ಸದ್ಭಕ್ತರ ಸಹಕಾರದೊಂದಿಗೆ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕರೆನೀಡಿದರು.

ಕೊಟ್ಟೂರು ವಾಣಿಜ್ಯ, ಶೈಕ್ಷಣಿಕ ಕ್ಷೇತ್ರವಾಗಿ ರಾಜ್ಯ ದಲ್ಲಿ ಮುಂಚೂಣಿಯಲ್ಲಿದ್ದು, ಸಂಪೂರ್ಣ ಧಾರ್ಮಿಕ ಕ್ಷೇತ್ರವಾಗಿ ಬದಲಾಗಬೇಕು ಎಂಬ ನಿಟ್ಟಿನಲ್ಲಿ ಪಂಚಾಚಾರ್ಯರರ ಯುಗಮಾನೋತ್ಸವ ಹಾಗೂ ಕೊಟ್ಟೂರಿನ ಡೋಣೂರು ಚಾನುಕೋಟಿ ಮಠದ ಡಾ. ಸಿದ್ದಲಿಂಗ ಶಿವಾಚಾರ್ಯರರ ಷಷ್ಟಾಬ್ಧಿ ಕಾರ್ಯಕ್ರಮವನ್ನು ಭಕ್ತರ ಅಪೇಕ್ಷೆಯಂತೆ ಹಮ್ಮಿಕೊಳ್ಳಲಾಗಿದೆ ಎಂದರು.

ಕಾರ್ಯಕ್ರಮದ ನಿಮಿತ್ತ 15 ದಿನಗಳ ಕಾಲ ಧರ್ಮ ಸಭೆ, ಶಿವಾಚಾರ್ಯರರು ಹಾಗೂ ಜಗದ್ಗುರು ಗಳಿಂದ ಪುರಾಣ ಪ್ರವಚನ, ಕೊಟ್ಟೂರು ತಾಲೂಕಿನ ಕೆರೆ ತುಂಬುವ ಯೋಜನೆಗೆ ಒತ್ತಾಯಿಸಿ, ಜಗದ್ಗುರುಗಳ ಹಾಗೂ ಶಿವಾಚಾರ್ಯರ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಳಿ ನಿಯೋಗ ಬಗ್ಗೆ ಸಭೆಯಲ್ಲಿ ಶ್ರೀಗಳು ಪ್ರಾಸ್ತಾಪಿಸಿದರು.

ಬೆಂಗಳೂರಿನ ವಿಭೂತಿಮಠದ ಡಾ. ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ನಂದಿಪುರ ಮಠದ ಡಾ. ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ, ಹಾಗೂ ಎಂಎಂಜೆ ಹರ್ಷವರ್ಧನ, ದೊಡ್ಡ ರಾಮಣ್ಣ, ಕೆ.ಎಸ್.ಈಶ್ವರಗೌಡ, ರಾಂಪುರ ವಿವೇಕಾನಂದ, ಹರಪನಹಳ್ಳಿ ಗುರುಬಸವರಾಜ್, ಆರ್.ಎಂ. ಗುರುಬಸವರಾಜ್ ಮುಂತಾದವರು ಕಾರ್ಯಕ್ರಮದ ರೂಪರೇಷ ಕುರಿತು ಚರ್ಚಿಸಿದರು.

ಕೊಟ್ಟೂರು ಚಾನುಕೋಟಿ ಮಠದ ಡಾ. ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಪಂಚಾಚಾರ್ಯರ ಯುಗಮಾನೋತ್ಸವ, ಷಷ್ಠಾಬ್ದಿ ಕಾರ್ಯಕ್ರಮದ ಔಚಿತ್ಯ ಕುರಿತು ಮಾತನಾಡಿದರು.

ಸಭೆಯಲ್ಲಿ ಚನ್ನಗಿರಿಯ ಜಯಮೃತ್ಯುಂಜಯ ಶಿವಾಚಾರ್ಯ ಸ್ವಾಮೀಜಿ, ಕೆರೂರಿನ ಡಾ, ಶಿವಕುಮಾರ್ ಸ್ವಾಮೀಜಿ, ಕೊಡಗಿನ ಶನಿವಾರ ಸಂತೆಯ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಅಕ್ಕಿ ಆಲೂರಿನ ಚಂದ್ರಶೇಖರ ಸ್ವಾಮೀಜಿ, ಗುಳೇದಗುಡ್ಡದ ಅಮರೇಶ್ವರ ಸ್ವಾಮೀಜಿ, ಅಂತಪುರ ಕುಮಾರ ಪಂಡಿತಾರಾಧ್ಯ ಶರಣರು, ಕೊಟ್ಟೂರೇಶ್ವರ ಸ್ವಾಮಿ ಮಠದ ಕ್ರೀಯಾಮೂರ್ತಿ ಶಿವಪ್ರಕಾಶ ಕೊಟ್ಟೂರು ದೇವರು. ಶಿವಗಂಗಾ ಡಾ. ಮಲ್ಲಯ್ಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಪಟ್ಟಣದ ವರ್ತಕರಾದ ಚಾಪಿ ಚಂದ್ರಪ್ಪ, ಬಿ.ಎಸ್. ವೀರೇಶ, ಕರಡಿ ಕೊಟ್ರಯ್ಯ ಬಿ.ಎಸ್. ಕೊಟ್ರೇಶ, ಬಸಾಪುರ ಪಂಪಾಪತಿ, ಕಾರ್ತಿಕ ಡಾ.ಕೆಂಭಾವಿ ಮಠದ ವಿಜಯಕುಮಾರ, ಬೂದಿ ಶಿವಕುಮಾರ, ಕೆ.ಮಂಜುನಾಥಗೌಡ, ಸಮಸ್ತ ಕಟ್ಟಿ ಮನಿ ದೈವಸ್ಥರು ಸೇರಿದಂತೆ ವಿವಿಧ ಮಠಾಧೀಶರು ಹಾಗೂ ಸಕಲ ಭಕ್ತಾದಿಗಳು ಮುಖಂಡರು ಪಾಲ್ಗೊಂಡಿದ್ದರು. ಕೂಡ್ಲಿಗಿ ಹಿರೇಮಠದ ಪ್ರಶಾಂತ ಸಾಗರ ಶಿವಾಚಾರ್ಯ ಸ್ವಾಮೀಜಿ ಸ್ವಾಗತಿಸಿ ವಂದಿಸಿದರು.

## ಆನಂದ ಬಾಣ




# ಪಿಡಿಓ ಹುದ್ದೆಗಳ ನೇಮಕಾತಿ ಪರೀಕ್ಷೆ : ನಿಷೇಧಾಜ್ಞೆ ಜಾರಿ

**ಹಂಪಿ ಟೈಮ್ಸ್ ಹೊಸಪೇಟೆ**

ಡಿ. 7 ಮತ್ತು 8 ರಂದು ನಡೆಯುವ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಉಳಿಕೆ ಮೂಲ ವೃಂದದ ಹುದ್ದೆಗಳ ನೇಮಕಾತಿ ಪರೀಕ್ಷಾ ಕೇಂದ್ರಗಳ ಸುತ್ತ ಮುತ್ತ 200 ಮೀಟರ್ ವ್ಯಾಪ್ತಿಯೊಳಗೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿನ ಉಳಿಕೆ ಮೂಲ ವೃಂದದ 150 ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳ ನೇಮಕಾತಿಗೆ ಕನ್ನಡ ಭಾಷಾ ಪರೀಕ್ಷೆ ಮತ್ತು ಸ್ಪರ್ಧಾತ್ಮಕ ಪರೀಕ್ಷಾ ನಡೆಯಲಿದೆ. ಕೇಂದ್ರಗಳ ಸುತ್ತ ಮುತ್ತ ನಿರ್ಬಂಧಿತ ಪ್ರದೇಶವೆಂದು ಘೋಷಿಸಲಾಗಿದ್ದು, ಪರೀಕ್ಷಾ ಕೇಂದ್ರಗಳ ಸುತ್ತ ಮುತ್ತಲಿನ ಜೆರಾಕ್ಸ್ ಮತ್ತು ಕಂಪ್ಯೂಟರ್ ಅಂಗಡಿಗಳನ್ನು ಮುಚ್ಚಿಸಲು ಆದೇಶಿಸಿ, ಎಲ್ಲಾ ಪರೀಕ್ಷಾ ಕೇಂದ್ರಗಳ ಪ್ರದೇಶದಲ್ಲಿ ಪರೀಕ್ಷಾರ್ಥಿಗಳಲ್ಲದ, ಪರೀಕ್ಷಾ ಉಸ್ತುವಾರಿ ಇಲ್ಲದ ಅಧಿಕಾರಿಗಳು, ಸಿಬ್ಬಂದಿ, ಸಾರ್ವಜನಿಕರು ಅಥವಾ ಯಾವುದೇ ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶವನ್ನು ಕಡ್ಡಾಯವಾಗಿ ನಿಷೇಧಿಸಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಆದೇಶ ಹೊರಡಿಸಿದ್ದಾರೆ.


ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ (ರಿ)
ವಿಜಯನಗರ ಜಿಲ್ಲಾ ಸರಕಾರಿ ನೌಕರರ ಸಮಾನ ಮನಸ್ಕರ ವೇದಿಕೆ
ಜಿಲ್ಲಾಧ್ಯಕ್ಷರು, ಜಿಲ್ಲಾ ಖಜಾಂಚಿ ಮತ್ತು ರಾಜ್ಯ ಪರಿಷತ್ತು ಸದಸ್ಯರ ಸ್ಥಾನದ ಚುನಾವಣೆ 2024–29

ಇಲ್ಲಿ ಎಲ್ಲರೂ ಸಮಾನರು, ಸದೃಢ ಸಂಘಟನೆ ರಚನೆಗೆ
ನಮಗೆ ಮತದಾನ ಮಾಡಿ ಆಶೀರ್ವದಿಸಿ

ಗೌರವಾನ್ವಿತ ನೌಕರ ಬಂಧುಗಳೇ,
ನೌಕರರ ಸಂಘದ ಜಿಲ್ಲಾಧ್ಯಕ್ಷರು, ಜಿಲ್ಲಾ ಖಜಾಂಚಿ ಮತ್ತು ರಾಜ್ಯ ಪರಿಷತ್ತು ಸದಸ್ಯರ ಸ್ಥಾನದ ಚುನಾವಣೆ ಹಿನ್ನಲೆಯಲ್ಲಿ ಸದೃಢ ಸಂಘಟನೆ ಕಟ್ಟುವ ಸದುದ್ದೇಶದಿಂದ ಹಾಗೂ ನೌಕರರಿಗೆ ಪ್ರಾಮಾಣಿಕವಾಗಿ ಸ್ಪಂದಿಸುವ ನಿಟ್ಟಿನಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದೇವೆ. ನೌಕರರ ಭವಿಷ್ಯ ನಿಮ್ಮ ಕೈಯಲ್ಲಿದೆ! ನಿಮ್ಮ ಸೇವೆಗಾಗಿ ನಾವು ಸದಾ ಸಿದ್ಧ. ನಿಮ್ಮದೊಂದು ಮತ ಪ್ರಗತಿಗೆ ಹಿತವಾಗಲಿ.



ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಕ್ರಮ ಸಂಖ್ಯೆ 2
ಶ್ರೀ ರಾಜೀವ್ ಹೆಚ್
ಕಛೇರಿ ಅಧೀಕ್ಷಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ಹೊಸಪೇಟೆ, ವಿಜಯನಗರ ಜಿಲ್ಲೆ



ಖಜಾಂಚಿ ಸ್ಥಾನದ ಅಭ್ಯರ್ಥಿ ಕ್ರಮ ಸಂಖ್ಯೆ 2
ಶ್ರೀ ಮಾಲತೇಶ ಮರೇಗೌಡರ
ಲೆಕ್ಕಾಧೀಕ್ಷಕರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,
ಹೊಸಪೇಟೆ, ವಿಜಯನಗರ ಜಿಲ್ಲೆ



ರಾಜ್ಯ ಪರಿಷತ್ ಸ್ಥಾನದ ಅಭ್ಯರ್ಥಿ ಕ್ರಮ ಸಂಖ್ಯೆ 2
ಶ್ರೀ ಸೈಯದ್ ಕಲೀಂ ಉಲ್ಲಾ
ವಾಣಿಜ್ಯ ತೆರಿಗೆ ಪರಿವೀಕ್ಷಕರು, ವಾಣಿಜ್ಯ ತೆರಿಗೆ ಜಂಟಿ ಆಯುಕ್ತರ ಕಛೇರಿ,
ಹೊಸಪೇಟೆ, ವಿಜಯನಗರ ಜಿಲ್ಲೆ

ಸೇವಾ ಧ್ಯೇಯೋದ್ದೇಶಗಳು
- ವಿಜಯನಗರ ಜಿಲ್ಲೆಯ ಸರ್ಕಾರಿ ನೌಕರರ ಸಂಘದ ಕಟ್ಟಡವನ್ನು ನೂತನವಾಗಿ ಹಾಗೂ ಸುಸಜ್ಜಿತವಾಗಿ ನಿರ್ಮಾಣ ಮೊದಲ ಆದ್ಯತೆ
- ವಿಜಯನಗರ ಜಿಲ್ಲೆಯ ಸರ್ಕಾರಿ ನೌಕರರ ಆರ್ಥಿಕ ಅನುಕೂಲಕ್ಕಾಗಿ ಮತ್ತು ಭದ್ರತೆಗಾಗಿ ನೌಕರರ ಪತ್ತಿನ ಸಹಕಾರಿ ಬ್ಯಾಂಕ್ ಹೊಂದುವ ಸದುದ್ದೇಶ ಹೊಂದಿರುತ್ತೇವೆ
- ಕಲ್ಯಾಣ ಕರ್ನಾಟಕ ವಿಶೇಷ ಸ್ಥಾನಮಾನ 371(ಜೆ) ಅನುಷ್ಠಾನಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ನೌಕರರ ಮುಂಬಡ್ತಿ, ವಿಶೇಷ ಮಂಜೂರು ಮಾಡಿಸುವ ಉದ್ದೇಶ ಹೊಂದಿರುತ್ತೇವೆ.
- ಜಿಲ್ಲೆಯ ಎಲ್ಲಾ ಇಲಾಖೆಯ ನೌಕರರಿಗೆ ಪ್ರತಿ ತಿಂಗಳ ಮಾಸಿಕ ವೇತನ ತಿಂಗಳ ಪ್ರಾರಂಭದಲ್ಲಿ ದೊರೆಯುವಂತೆ ಪ್ರಯತ್ನಿಸುವುದು.
- ಜಿಲ್ಲೆಯಲ್ಲಿ ಪ್ರಾರಂಭವಾಗದೇ ಇರುವ ಇಲಾಖೆಗಳ ಸ್ಥಾಪನೆಗೆ ಕ್ರಮವಹಿಸಲು ಪ್ರಯತ್ನಿಸುವುದು
- ವಿಜಯನಗರ ಜಿಲ್ಲೆಯ ಮಹಿಳಾ ನೌಕರರು, ಅವರುಗಳು ಕರ್ತವ್ಯ ನಿರ್ವಹಿಸುವ ಸ್ಥಳದಲ್ಲಿ ಅವರುಗಳ ಹಕ್ಕುಗಳಿಗೆ ಧಕ್ಕೆಬಾರದಂಥೆ, ಪ್ರಾಮಾಣಿಕ ಸೇವೆ ಮಾಡುವ ಸುಂದರ ವಾತವರಣ ನಿರ್ಮಿಸಿ ಕೊಡುವುದು.
- 40 ವರ್ಷ ಮೀರಿದ ಎಲ್ಲಾ ನೌಕರರನ್ನು ಗಮನದಲ್ಲಿಟ್ಟುಕೊಂಡು ಪ್ರತಿ 6 ತಿಂಗಳಿಗೊಮ್ಮೆ ಉಚಿತ ಆರೋಗ್ಯ ಶಿಬಿರಗಳನ್ನು ತಜ್ಞ ವೈದ್ಯರಿಂದ ಆಯೋಜಿಸಲಾಗುವುದು.
- ಹೊಸಪೇಟೆ ನಗರವು ಪ್ರವಾಸಿ ಕೇಂದ್ರವಾಗಿರುವುದರಿಮದ ವಿವಿಧ ಭಾಗದ ನೌಕರರು ಆಗಮಿಸುವುದರಿಂದ ಸುಸಜ್ಜಿತ 10 ವಸತಿ ಗೃಹಗಳನ್ನು ನಿರ್ಮಾಣ ಮಾಡುವ ಸದುದ್ದೇಶ ಹೊಂದಿರುತ್ತೇವೆ.
- ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಂಟಿ ಸಮಾಲೋಚನಾ ಸಮಿತಿ ಸಭೆಗಳು ಕಾಲಕಾಲಕ್ಕೆ ಸಮರ್ಪಕವಾಗಿ ನಡೆಯುವಂತೆ ಹಾಗೂ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಅನುಷ್ಠಾನಗೊಳಿಸಲು ಪ್ರಯತ್ನಿಸುವ ಉದ್ದೇಶ ಹೊಂದಿರುತ್ತೇವೆ.
- ಜಿಲ್ಲೆಯಲ್ಲಿ ನೌಕರರ ಪ್ರತಿಭಾವಂತ ಮಕ್ಕಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿಯನ್ನು ಆಯೋಜಿಸುವುದು.
- ಜಿಲ್ಲೆಯ ಎಸ್ಎಸ್ಎಲ್‌ಸಿ, ಪಿಯುಸಿ, ವೃತ್ತಿ ಶಿಕ್ಷಣ ಹಾಗೂ ಉನ್ನತ ವಿದ್ಯಾಭ್ಯಾಸದಲ್ಲಿ ಹೆಚ್ಚು ಅಂಕಗಳನ್ನು ಪಡೆದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

ಮತದಾನ
ದಿನಾಂಕ: 04–12–2024, ಬುಧವಾರ
ಬೆಳಿಗ್ಗೆ 09–00 ರಿಂದ ಸಂಜೆ 04–00 ಗಂಟೆಯವರಗೆ
ಸ್ಥಳ : ಸರ್ಕಾರಿ ನೌಕರರ ಭವನ, ಸಂಡೂರು ರಸ್ತೆ, ಹೊಸಪೇಟೆ

ನಮ್ಮ ತಂಡದ ಉದ್ದೇಶ ಸ್ನೇಹ, ಸೌಹಾರ್ದ ಹಾಗೂ ಸದೃಡ ಸಂಘಟನೆಯೇ ನಮ್ಮ ಗುರಿ

ನಿಮ್ಮ ಬೆಂಬಲದ ನಿರೀಕ್ಷೆಯಲ್ಲಿ ತಮ್ಮ ಆಗಮನಾಭಿಲಾಷಿಗಳು : ಶ್ರೀ ರಾಜೀವ್ ಹೆಚ್ । ಶ್ರೀ ಮಾಲತೇಶ ಮರೇಗೌಡರ । ಶ್ರೀ ಸೈಯದ್ ಕಲೀಂ ಉಲ್ಲಾ | ಪ್ರಕಟಣೆ: ಸಮಾನ ಮನಸ್ಕರ ವೇದಿಕೆ, ವಿಜಯನಗರ ಜಿಲ್ಲೆ

## ಸ್ಟುಡೆಂಟ್ ಕಾಲಂ

### ಭ್ರಷ್ಟಾಚಾರ ಪೆಡಂಭೂತ ನಿಲ್ಲುವುದೇ?



ಒಂದೂರಲ್ಲಿ ವಿಶಾಖ ಮತ್ತು ಪರಿಣಿತಿ ಎನ್ನುವ ಇಬ್ಬರು ಗೆಳತಿಯರಿದ್ದರು. ಅವರು ತಮ್ಮ ಊರಿನಲ್ಲಿ ಇರುವ ಪ್ರೌಢಶಾಲೆಯಲ್ಲಿ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ಒಂದು ದಿನ ಶಾಲೆ ಮುಗಿದ ನಂತರ ಇಬ್ಬರು ತಮ್ಮ ಮನೆಗೆ ಹೋಗುವ ದಾರಿಯಲ್ಲಿ ಒಂದು ಅಂಗನವಾಡಿಯ ಪ್ರವೇಶ ಸಮಾರಂಭ ನಡೆಯುತ್ತಿರುವುದನ್ನು ನೋಡಿದರು. ಅಂಗನವಾಡಿಯ ನಿರ್ಮಾಣಕ್ಕೆ ಮಾಡಿದ ಖರ್ಚು 70ಲಕ್ಷ ಎಂದು ಬರೆದಿದ್ದರು. ಅದನ್ನು ನೋಡಿದ ಪರಿಣಿತಿ 'ಈ ಅಂಗನವಾಡಿ ಕೇಂದ್ರದ ನಿರ್ಮಾಣಕ್ಕೆ 70ಲಕ್ಷ ರೂಪಾಯಿಗಳು ಖರ್ಚಾಗಿರುವುದು ನಿಜಾನಾ!' ಎಂದು ಆಶ್ಚರ್ಯದಿಂದ ಕೇಳಿದಳು. ಆಗ ವಿಶಾಖ 'ಇಲ್ಲ ಅಷ್ಟು ಹಣ ಖರ್ಚಾಗಿಲ್ಲ ಬಿಡು' ಎಂದಳು. 'ಮತ್ತೆ ಅಲ್ಲಿ ಬರೆದಿದ್ದಾರೆ' ಎಂದು ಮರು ಪ್ರಶ್ನೆ ಹಾಕಿದಳು ಪರಿಣಿತಿ.



ಆಗ ವಿಶಾಖ 'ಅಯ್ಯೋ ಪರಿಣಿತಿ, ನಮ್ಮ ಶಾಲೆಯ ತರಗತಿ ಇರುವ ಅಳತೆಯೇ ಇದು ಇರುವುದು. ಅಷ್ಟಕ್ಕೆ ಏನಾದರೂ ಎಪ್ಪತ್ತು ಲಕ್ಷ ರೂಪಾಯಿಗಳು ಖರ್ಚಾಗಲು ಸಾಧ್ಯನಾ!' ಎಂದಳು. 'ಹಾಗಾದರೆ ಸರ್ಕಾರ ಕೊಟ್ಟಿದ್ದ ಅಷ್ಟೊಂದು ಹಣ ಎಲ್ಲಿ ಹೋಯ್ತು' ಎಂದು ಮತ್ತೆ ಕೇಳಿದಳುಪರಿಣಿತಿ.ಸರ್ಕಾರವೇನೋ 70 ಲಕ್ಷ ರೂಪಾಯಿಗಳನ್ನು ಅಂಗನವಾಡಿ ಕೇಂದ್ರ ನಿರ್ಮಾಣಕ್ಕೆ ಕೊಟ್ಟಿದೆ. ಆದರೆ ಅದು ಕಟ್ಟಡ ಕೆಲಸಕ್ಕೆ ಬಿಟ್ಟು ನಮ್ಮ ಜನಪ್ರತಿನಿಧಿಗಳ ಜೇಬಿಗೆ ಸೇರಿರುತ್ತದೆ. ಇಲ್ಲವಾಗಿದ್ದರೆ 70ಲಕ್ಷ ಅಂಗನವಾಡಿ ಕೇಂದ್ರ ನಿರ್ಮಾಣ ಹೀಗಿರುತ್ತಿತ್ತಾ? ಸರಿ ಹೋಗ್ಲಿ ಇದನ್ನಾದರೂ ಭದ್ರಬುನಾದಿ ಹಾಕಿ ಗಟ್ಟಿಯಾಗಿ ಕಟ್ಟಿದ್ದಾರೆ ಎಂದರೆ ಅದು ಇಲ್ಲ. ನಮ್ಮ ಪ್ರತಿನಿಧಿಗಳು ಹಂಚಿಕೊಂಡು ಉಳಿದ ಹಣದಿಂದ ಅಗ್ಗದ ಬೆಲೆಯ ವಸ್ತುಗಳನ್ನು ತಂದು ನಿರ್ಮಿಸಿರುತ್ತಾರೆ. ಹಾಗಾಗಿ ಈ ಕಟ್ಟಡ ಕೆಲವು ವರ್ಷಗಳವರೆಗೆ ಮಾತ್ರ ಬಾಳಿಕೆ ಬರುತ್ತದೆ' ಎಂದಳು ವಿಶಾಖ.

'ಹಾಗಾದರೆ ಇದು ಭ್ರಷ್ಟಾಚಾರದ ಕೆಲಸ ಅಲ್ವಾ?' ಎಂದಳು ಪರಿಣಿತಿ. 'ಹೌದು ಇದು ಭ್ರಷ್ಟಾಚಾರವೇ ಸರಿ. ಇಲ್ಲಿ ಮಾತ್ರವಲ್ಲ, ಎಲ್ಲಾ ಕ್ಷೇತ್ರಗಳಲ್ಲೂ ಇದು ವ್ಯಾಪಿಸಿದೆ. ಅಂದರೆ ವಿವಿಧ ಕಟ್ಟಡ ನಿರ್ಮಾಣದಲ್ಲಿ, ರಸ್ತೆ ನಿರ್ಮಾಣದಲ್ಲಿ, ಪ್ರಜೆಗಳ ಕೈಗೆ ಸೇರಬೇಕಾದ ಹಣದ ವಿಷಯದಲ್ಲಿ ಮಾತ್ರವಲ್ಲದೆ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿಯೂ ಸಹ ಇದು ನಡೆಯುತ್ತಿದೆ. ಪರಿಣಾಮವಾಗಿ ದೇಶದ ಪ್ರಗತಿ ಕುಂಠಿತವಾಗುತ್ತಿದೆ ಎನ್ನಬಹುದು. ಇದಕ್ಕೆ ಕಾರಣ ನಮ್ಮ ಜನರು ಮತ ಹಾಕಿ ಆರಿಸಿ ಕಳುಹಿಸಿದ ಪ್ರಜಾಪ್ರತಿನಿಧಿಗಳು ಹಾಗೂ ಅವರ ಸ್ವಾರ್ಥ ಮತ್ತು ಆಲಾಸ್ಯತನದಿಂದ ಎನ್ನಬಹುದು' ಎಂದಳು ವಿಶಾಖ. ಹೀಗೆ ಇಬ್ಬರೂ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಾ ಮುಂದೆ ಸಾಗಿದರು.

– **ಎಸ್. ಸೌಮ್ಯ. 10ಮೇ ತರಗತಿ.**
**ಸರ್ಕಾರಿ ಪ್ರೌಢಶಾಲೆ ಬಸರಕೋಡು. ಹ.ಬೊ.ಹಳ್ಳಿ(ತಾ)**

### ಪ್ರೀತಿಯ ವಿದ್ಯಾರ್ಥಿಗಳೇ ನೀವೂ ಬರೆಯಿರಿ

ಪ್ರೀತಿಯ ವಿದ್ಯಾರ್ಥಿಗಳೇ ನಿಮಗಾಗಿ ನಿಮ್ಮ ಬರವಣಿಗೆ ಕೌಶಲ ಹೆಚ್ಚಿಸಿಕೊಳ್ಳಲು **ಹಂಪಿ ಟೈಮ್ಸ್ ಸ್ಟುಡೆಂಟ್ ಕಾಲಂ ವೇದಿಕೆ** ಕಲ್ಪಿಸಿದೆ. ನೀವು ಸಣ್ಣ ಸಣ್ಣ ಕಥೆ, ಕವನಗಳನ್ನು ಬರೆಯಬಹುದು. ಇಂದೇ ಆರಂಭಿಸಿ ನೀವು ಭವಿಷ್ಯದಲ್ಲಿ ಲೇಖಕರಾಗಿ ಬೆಳೆಯಿರಿ.
ಇ-ಮೇಲ್:hampitimes@gmail.com
M: 94486 33038

### ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

## ವಸ್ತುವಾಚಕವಾಯ್ತು ಗುರುವಿನ ಅಸ್ಮಿತೆ! | ಬಿಗುವಾದ ಗುರುಶಿಷ್ಯರ ಬಾಂಧವ್ಯ

# ಶಿಕ್ಷಣ ಕ್ರಮ ಪಲ್ಲಟ ಕುಸಿದ ಗುಣಮಟ್ಟ


ಗುರು ಶಿಷ್ಯನೆಂಬ ಅರಿವಿನ ಸಂಬಂಧಕ್ಕೆ ಜಾತಿ, ಲಿಂಗ, ವರ್ಣ, ಪ್ರದೇಶ ಹಾಗೂ ವಯಸ್ಸಿನ ನೆಲೆಯ ಬೇಧವಿಲ್ಲ ಎಲ್ಲರೊಳಗೂ ಗುರು ಅಸ್ಮಿತೆಯನ್ನು ಪಡೆದಿದ್ದಾನೆ. ಗುರುವಿನ ಗುಲಾಮನಾಗದ ತನಕ ದೊರೆಯದಣ್ಣ ಮುಕ್ತಿ ಅನ್ನುವ ದಾಸರ ಸೊಲ್ಲು ನಮ್ಮ ಚಿತ್ತ ಬಿತ್ತಿಯಲ್ಲಿ ಗಟ್ಟಿಯಾಗಿ ನಿಲ್ಲಬೇಕು ಮತ್ತು ನಮ್ಮ ಬದುಕಿನಲ್ಲಿ ಅದು ಜೀವಂತ ಸತ್ವವಾಗಬೇಕು ಆಗ ಮಾತ್ರ ಸತ್ವಪೂರ್ಣ ರಾಷ್ಟ್ರವನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ಪರಂಪರೆಯ ಒಳಗೆ ಗುರು ಮತ್ತು ಶಿಷ್ಯನಲ್ಲಿ ಎಣಿಕೆಗೆ ದಕ್ಕದಷ್ಟು ಬಿಗುವಾದ ಅರ್ಪಣ ಭಾವ ಸಂವೇದನೆ ಇದೆ. ಇದೇ ಭಾರತೀಯ ಜೀವನದರ್ಶನ ವನ್ನು ಕಾಪಿಟ್ಟುಕೊಂಡಿದೆ. ಗುರು ಮಾತ್ರ ತನ್ನ ಶಿಷ್ಯರು ಬೆಳೆದಷ್ಟು ತನ್ನೊಳಗೆ ಸಂಭ್ರಮಗೊಳ್ಳುತ್ತಾನೆ ಮತ್ತು ಇದೇ ತನ್ನ ಬದುಕಿನ ಸಾರ್ಥಕ ಕ್ಷಣ ಅಂತ ಭಾವಿಸುತ್ತಾನೆ. ಗುರು ಅಂದರೆ ಕೇವಲ ಪಠ್ಯವನ್ನು ಬೋಧಿಸುವ ಪ್ರತೀಕವಲ್ಲ ಬದಲಿಗೆ ಅವನೊಬ್ಬ ವಿದ್ಯಾರ್ಥಿಗಳ ಭವಿಷ್ಯವನ್ನು ಕಟ್ಟುವ ಶಿಲ್ಪಿಯಾಗಿದ್ದಾನೆ. ಇಲ್ಲಿ ಪಠ್ಯಗಳ ಬೋಧನೆಯಿದೆ, ಮಾರ್ಗ ದರ್ಶನವಿದೆ, ಸಂಸ್ಕಾರದ ಸ್ಪರ್ಶವನ್ನು ನೀಡುವ ನೆಲೆ ಯಿಂದ ಬದುಕಿನ ಬೇರುಗಳು ಕದಲದಂತೆ ಕಟ್ಟುವ ತಿಳುವಳಿ ಕೆಯ ಜೊತೆಯಲ್ಲಿ ಪ್ರೀತಿ, ಸಹನೆ, ವಾತ್ಸಲ್ಯ, ಕೋಪ, ಶಿಕ್ಷೆಗಳೆಂಬ ರೀತಿ ನೀತಿಗಳು ದಿನನಿತ್ಯ ನಡೆದಾಡುವುದೇ ವಿದ್ಯಾರ್ಥಿಗಳಲ್ಲಿ ಚಲನ ಶೀಲತೆಯನ್ನು ಹುಟ್ಟು ಹಾಕಿದೆ ಅಲ್ಲದೇ ಗುರು ಶಿಷ್ಯರ ಬಾಂಧವ್ಯವನ್ನು ಬಿಗುವಾಗಿಸಿದೆ.

ಆಧುನಿಕ ಪರಿಸರದಲ್ಲಿ ಬದುಕು ನಡೆಸುತ್ತಿರುವ ನಾವುಗಳು ಗುರು ಅನ್ನುವ ಪರಿಕಲ್ಪನೆಯ ಮೌಲ್ಯೀಕರಣ ವನ್ನು ಸರಳೀಕರಿಸಿದ್ದೇವೆ ಈ ಸರಳೀಕರಣವೇ ಶಿಕ್ಷಣ ವ್ಯವಸ್ಥೆಯ ಜ್ಞಾನರೂಪವನ್ನು ಪಲ್ಲಟಿಸಿದೆ. ಆತ್ಮಸಾಕ್ಷಿಯಾಗಿ ತಿಳುವಳಿಕೆಯನ್ನು ವಿದ್ಯಾರ್ಥಿ ಗಳಿಗೆ ಹಂಚಿ ಬೆಳೆಸುವ ಗುರುವಿನ ಸ್ಥಾನವನ್ನು ರಾಜಕೀಯ ಹಾಗೂ ಆರ್ಥಿಕ ವ್ಯವಸ್ಥೆಗಳು ನಿರ್ವ ಚಿಸಿದ ಬಗೆ ಗುರು ಮತ್ತು ಶಿಷ್ಯರ ಸಂಬಂಧವನ್ನು ಪಲ್ಲಟಿಸಿ ರುವ ಜೊತೆಯಲ್ಲಿ ಸಾಂಸ್ಕೃತಿಕ ವ್ಯವಸ್ಥೆಯಲ್ಲಿನ ಸ್ಥಾನ ಮಾನ ವನ್ನು ಇಳಿಮುಖವಾಗಿಸಿದೆ. ಈ ಪಲ್ಲಟಗಳು ನಮಗೆ



ಡಾ.ಸುಬ್ರಹ್ಮಣ್ಯ ಸಿ ಕುಂದೂರು
ಲೇಖಕರು, ಮಂಗಳೂರು

Scan For Digital Colourful
HAMPI TIMES E-paper



ಸಹಜವೆಂಬಂತೆ ಅನ್ನಿಸಿದರೂ ಅದರ ಒಳರೂಪಗಳು ಮಾತ್ರ ಮನುಕುಲದ ದುರಂತದ ಬೀಜಗಳಾಗಿವೆ. ಗುರು ಅನ್ನುವ ಪದವಿಯ ಶ್ರೇಷ್ಠತೆಯ ಪ್ರಜ್ಞೆಯು ನಮ್ಮ ಬದುಕಿನ ಲಯದಲ್ಲಿ ಬಿಗುವಾಗಿ ನಡೆಯುವ ಬದಲು ದಿನ ದಿನವೂ ಒತ್ತಡದ ಜೊತೆಯಲ್ಲಿ ಬದುಕನ್ನು ಸಾಗಿಸುವ ನಾವುಗಳು ಒಂದೋ ಎರಡೋ ಮಗುವನ್ನು ಹೊಂದಿಕೊಂಡು ಅದನ್ನೇ ಮದ್ದಾಗಿ ಬೆಳೆಸಿ, ಅವು ನಡೆದಿದ್ದು, ಮಾಡಿದ್ದು ಶ್ರೇಷ್ಠವೆಂದು ಹೆಮ್ಮೆ ಪಡುತ್ತೇವೆ ಮತ್ತು ಹೇಗಾದರೂ ಮಾಡಿ ನಾಲ್ಕು ಅಕ್ಷರ ಕಲಿತರೆ ಸಾಕು ಆಸ್ತಿ, ಮನೆಗಳು ಉಂಟು ಮುಂದೆ ಹೇಗಾದರೂ ಯಾರಿಂದಾದರೂ ಪ್ರಭಾವ ಹಾಕಿಸಿ ಕೆಲಸ ಕೊಡಿಸುತ್ತೇನೆ ಅನ್ನುವ ನಂಬಿಕೆಯಿಂದ ಮಕ್ಕಳಿಗೆ ಹೊಡೆದು, ಬಡಿದು, ಬೈದು, ಒತ್ತಡ ಹಾಕಿ ಕಲಿಸುವುದು ಬೇಡ ಪಾಸು ಆದರೆ ಸಾಕು ಅಂತ ಯೋಚಿಸುವ ನಾವುಗಳು ಮಕ್ಕಳಿಗೆ ಹೆದರಿಕೊಂಡು ಅವರು ಹೇಳಿದಂತೆ ಕೇಳಿಕೊಂಡು ನಡೆಯುತ್ತಿದ್ದೇವೆ ಅಲ್ಲದೇ ಸರ್ಕಾರಕ್ಕೆ ಒತ್ತಡ ತಂದು ಪರೀಕ್ಷೆಯಲ್ಲಿ, ಪಠ್ಯದಲ್ಲಿ, ಕಲಿಕೆಯ ವಿಧಾನದಲ್ಲಿಯೇ ಬದಲಾವಣೆಯನ್ನು ರೂಪಿಸಿಕೊಂಡು ಶಿಕ್ಷಣ ಪದ್ಧತಿಯನ್ನೇ ಸರಳವಾಗಿಸಿ ಅದರ ಗುಣಮಟ್ಟವನ್ನೇ ಕಳೆದಿದ್ದೇವೆ ಎನ್ನುವುದನ್ನು ಪ್ರತಿಯೊಬ್ಬರು ನೆನಪು ಮಾಡಿಕೊಳ್ಳುವ ಅಗತ್ಯವಿದೆ. ಈ ನಡುವೇ ಶಿಕ್ಷಣ ವ್ಯವಸ್ಥೆಯ ಭಾಗವಾಗಿರುವ ಗುರುವಿನ ಸ್ಥಾನವು ಸರ್ಕಾರಕ್ಕೆ, ಪೋಷಕರಿಗೆ, ವಿದ್ಯಾರ್ಥಿಗಳಿಗೆ ತಕ್ಕುದಾದ ವೃತ್ತಿದಾರನಂತೆ ತೋರುತ್ತದೆ ಮತ್ತು ಹಾಗೆಯೇ ಇರಬೇಕಾದ ಅನಿವಾರ್ಯತೆಯು ಈಗ ನಿರ್ಮಾಣ ವಾಗಿದೆ. ಇದಕ್ಕೆ ಮುಖ್ಯ ಕಾರಣ ವಿದ್ಯಾರ್ಥಿಗಳಾಗಲಿ, ಪೋಷಕರಾಗಲಿ ಗುರುವನ್ನು ಗುರುವಾಗಿ ಕಾಣುವ ಭಾವನಾತ್ಮಕತೆಯನ್ನು ಕಳೆದುಕೊಂಡಿದ್ದು ಇದು ಇಂದಿನ ಸಾಮಾಜೀಕರಣದ ಆತ್ಮಕ್ಕೆ ಬಲವಾದ ಪೆಟ್ಟು ಬಿದ್ದಂತೆ ಅನ್ನಿಸುತ್ತದೆ.

ಶಿಕ್ಷಣ ವ್ಯವಸ್ಥೆಯು ಗುರುವಿನ ಪಠ್ಯಬೋಧನೆಯ ಮಾದರಿಯನ್ನು ತಾಂತ್ರಿಕತೆಗೆ ಒಗ್ಗಿಸಿದೆ ಈ ತಾಂತ್ರಿಕ ಸಾಧನಗಳು ಲೋಕದ ಮಾಹಿತಿಯನ್ನು ತನ್ನ ಒಡಲಿನಲ್ಲಿ ತುಂಬಿಕೊಂಡು ಅದನ್ನೇ ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಿದೆ ಮತ್ತು ಮಾಡುತಿದೆ. ವಿದ್ಯಾರ್ಥಿಗಳು ಸಹ ಇದನ್ನೇ ಪ್ರಧಾನ ಜ್ಞಾನಧಾರೆ ಅಂತ ಗ್ರಹಿಸಿಕೊಂಡು ಅಪ್ಪಿಕೊಂಡಿರುವುದರಿಂದ ಗುರುವಿನ ಅಸ್ಮಿತೆಯು ವಸ್ತುವಾಚಕ ವಾಯಿತು. ಈ ರೀತಿಯ ಪಲ್ಲಟಗಳು ಬಹು ಮುಖ್ಯವಾಗಿ ಗುರು ಮತ್ತು ಶಿಷ್ಯನ ನಡುವಿನಲ್ಲಿ ಬಿಗುವಾದ ಬಾಂಧವ್ಯವನ್ನೇ ಕಳಚುವಂತೆ ಮಾಡಿತು. ಶಿಕ್ಷಕ ಎಂಬ ವೃತ್ತಿಯು ತಿಳುವಳಿಕೆಯನ್ನು ಹಂಚಿ ಖುಷಿಗೊಳ್ಳುವ ಮೂಲಕ ಆತ್ಮತೃಪ್ತಿ ಪಡೆಯುವುದೇ ಆಗಿದೆ ವಿನಹ ವಿಭಿನ್ನ ನೆಲೆಯಲ್ಲಿ ಹಣವನ್ನು ಗಳಿಸುವ ಕೆಲಸವಲ್ಲ ಇಲ್ಲಿ ಗುರು ವಿದ್ಯಾರ್ಥಿಗಳ ಚಿತ್ತದಲ್ಲಿ ನಿಲ್ಲಬೇಕು. ಈ ನಿಲ್ಲುವಿಕೆಯ ಹಿಂದೆ ಗುರುವಿನ ಕರ್ತವ್ಯ ಮಹತ್ವವಾಗಿದೆ. ಪಠ್ಯವನ್ನು ಬೋಧಿಸುವುದು, ದಂಡಿಸುವುದು, ಅಂಕವನ್ನು ಪಡೆಯುವುದಕ್ಕೆ ಸೂಕ್ತವಾದ ನೋಟ್ಸ್ ನೀಡುವುದು, ಸಂಬಳವನ್ನು ಪಡೆಯುವುದು, ನನ್ನ ತರಗತಿಯನ್ನು ಬಿಟ್ಟು ಬೇರೆ ತರಗತಿಯನ್ನು ತೆಗೆದುಕೊಳ್ಳುವುದು ನನ್ನ ಕರ್ತವ್ಯವಲ್ಲ ಎಂದು ಭಾವಿಸುವ ಯಾವ ಶಿಕ್ಷಕನೂ ಆದರ್ಶವಾಗಿ ವಿದ್ಯಾರ್ಥಿಯ ಮನಸ್ಸಿನಲ್ಲಿ ಉಳಿಯುವುದಿಲ್ಲ. ಬದಲಿಗೆ ತನ್ನ ತಿಳುವಳಿಕೆಯನ್ನು ಹೆಚ್ಚಿಸಿಕೊಂಡು ತನ್ನ ವೃತ್ತಿಗೆ ನ್ಯಾಯವನ್ನು ಒದಗಿಸುವ ನೆಲೆಯಲ್ಲಿ ವಿದ್ಯಾರ್ಥಿಗಳ ಸಂವೇದನೆಯನ್ನು ಅರ್ಥಮಾಡಿಕೊಳ್ಳುವ ತಾಯ್ತನ ಇರಬೇಕು ಮಾತ್ರವಲ್ಲದೇ ವಿದ್ಯಾರ್ಥಿಗಳಿಗೂ ಇವರು ನನ್ನ ಗುರುಗಳು ಅನ್ನುವ ಪೂರ್ಣಭಾವ ಉದಯಿಸುವಂತೆ ನಡೆದುಕೊಳ್ಳುವುದನ್ನು ಅಭ್ಯಾಸ ಮಾಡಿಕೊಳ್ಳುವುದು ಇಂದಿನ ಅಗತ್ಯತೆಗಳಲ್ಲಿ ಒಂದಾಗಿದೆ.

ವಿದ್ಯಾರ್ಥಿಗಳು ಗುರುಗಳನ್ನು ಗ್ರಹಿಸಿದ ಬಗೆ, ಗುರುಗಳ ವಿದ್ಯಾರ್ಥಿಗಳನ್ನು ಗ್ರಹಿಸಿದ ಬಗೆ, ಸರ್ಕಾರಗಳು ರೂಪಿಸಿದ ಶಿಕ್ಷಣಕ್ಕೆ ಸಂಬಂಧಿಸಿದ ಯೋಜನೆಗಳು, ಶಿಕ್ಷಣ ಕ್ರಮವನ್ನು ಪಲ್ಲಟಿಸಿ ಸುಧಾರಣೆಯನ್ನು ಹುಟ್ಟು ಹಾಕುತ್ತೇವೆ ಎನ್ನುವ ರಾಜಕೀಯ ಪ್ರೇರಿತವಾದ ಹೋರಾಟಗಳು, ಸಾಮಾಜಿಕ ಹಾಗೂ ರಾಜಕೀಯ ಸಂಗತಿಗಳು ಶಾಲೆ, ಕಾಲೇಜಿನ ಪರಿಸರವನ್ನು ಪ್ರವೇಶ ಮಾಡಿ ಗೊಂದಲವನ್ನು ದ್ವೇಷವನ್ನು ಉಂಟು ಮಾಡಿರುವುದಲ್ಲದೆ ಶಿಕ್ಷಕರ ಮತ್ತು ಶಿಕ್ಷಣದ ಮೀಮಾಂಸೆಯ ಅಭಿವ್ಯಕ್ತಿಯ ವಿನ್ಯಾಸವನ್ನೇ ಕಳೆದಿದೆ. ಈ ನಡುವೆ ಗುರು ಶಿಷ್ಯರು ಒಟ್ಟಿಗೆ ಕಲಿಯುವ ಬೆಳೆಯುವ ಸುಜ್ಞಾನದ ಪರಂಪರೆಯೊಂದು ಜೀವ ಪಡೆಯುವ ಅಗತ್ಯತೆ ಇದೆ ಆಗ ಮಾತ್ರ ಜ್ಞಾನಪೂರ್ಣವಾದ ಮನಸ್ಸುಗಳು ದೇಶವನ್ನು ಸಮೃದ್ಧವಾಗಿ ಕಟ್ಟುವುದಕ್ಕೆ ಸಾಧ್ಯವಾಗುತ್ತದೆ.

# ರಾಯಭಾರಿಯಾದ ನಗುವಿನ ಒಡತಿ ಪುಟ್ಟ ಪೋರಿ

5 ವರ್ಷದ ಆ ಮಗುವನ್ನು ಆಕೆಯ ತಾಯಿ ಬ್ರೆಡ್ ತರಲು ಬೇಕರಿಗೆ ಕಳುಹಿಸಿದಳು. ಆದರೆ ಆಕೆ ಬೇಕರಿಯನ್ನೇ ಮನೆಗೆ ತಂದಳು. ಆದುದಿಷ್ಟೇ.

ತನ್ನ ತಾಯಿ ಹೇಳಿದಂತೆ ಬೇಕರಿಗೆ ಹೋದ ಆ ಪುಟ್ಟ ಮಗು ಬೇಕರಿಯಿಂದ ಒಂದು ಪೌಂಡ್ ಬ್ರೆಡ್ ತೆಗೆದುಕೊಂಡು ಮನೆಗೆ ಮರಳುತ್ತಿತ್ತು. ಶಾಲೆ ಮುಗಿಸಿ ಮನೆಗೆ ಮರಳುತ್ತಿದ್ದ ಆಕೆಯ ಚಿಕ್ಕಪ್ಪ ತನ್ನ ಮೊಬೈಲಿನಲ್ಲಿ ಆಕೆಯ ಒಂದು ಫೋಟೋ ತೆಗೆದ. ಕೈಯಲ್ಲಿ ಬ್ರೆಡ್ ಪ್ಯಾಕೆಟ್ ಹಿಡಿದು ಮಣ್ಣಿನ ರಸ್ತೆಯಲ್ಲಿ ಓಡಿ ಹೊರಟಿದ್ದ ಮಗುವಿನಲ್ಲಿ ವಿಶ್ವವನ್ನು ಜಯಿಸಿದಂತಹ ಮುಗ್ಧ ಸಂತೋಷವನ್ನು ಕಂಡುಕೊಂಡ ಚಿಕ್ಕಪ್ಪ ತಾನು ತೆಗೆದ ಈ ಚಿತ್ರವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಕಿದ. ಅಲ್ಬಾನಿ ಬ್ರೆಡ್ ಕೈಯಲ್ಲಿ ಹಿಡಿದ ಈ ಫೋಟೋ ವೈರಲ್ ಆಗಿ ಮಗುವಿನ ಮುಖದಲ್ಲಿನ ಸಂತಸ ಜನರ ಮನಸೂರೆಗೊಂಡಿತು.

ತಾವು ಬ್ರೆಡ್ ನ ಜಾಹೀರಾತಿನಲ್ಲಿ ಇಂಥದ್ದೇ ಫೋಟೋವನ್ನು ನೋಡಲು ಬಯಸುವುದಾಗಿ ಜನಾಭಿಪ್ರಾಯ ರೂಪುಗೊಂಡು ಕೆಲವೇ ದಿನಗಳಲ್ಲಿ ಅಲ್ಬೇನಿಯ ಎಲ್ಲಾ ಪ್ರಕಟಣಾ ಫಲಕಗಳ ಮೇಲೆ ಟ್ರಕ್ ಗಳ ಮೇಲೆ ಆಕೆಯ ಚಿತ್ರ ರಾರಾಜಿಸಿತು.

ಲೆಥುಕುಕನ್ಯಾ ಮಮಾಜಿ (Lethukukhanya Mjaji) ಎಂಬ ಐದು ವರ್ಷದ ಈ ಬಾಲೆ ಸೌತ್ ಆಫ್ರಿಕಾದ ಮನ ಸೆಳೆಯುವ ನಗುವಿನ ಒಡತಿಯಾದಳು.

ಜನಾಗ್ರಹದ ಮೇರೆಗೆ ಅಲ್ಬಾನಿಯಲ್ಲಿ ಆಕೆಯ ಸುಂದರವಾದ ನಗುವಿನ ಭಾವಚಿತ್ರ ರಾರಾಜಿಸಿ ಅಲ್ಬಾನಿ ಬ್ರೆಡ್ ಕಂಪನಿಯವರು ಆಕೆಯ ಪಾಲಕರನ್ನು ಭೇಟಿಯಾದರು. ಆಕೆಯ ತಾಯಿಗೆ ಒಂದು ಮನೆಯನ್ನು ಕೊಡ ಮಾಡಿದ ಕಂಪನಿ ಪುಟ್ಟ ಬಾಲಕಿಯ ಪದವಿಯವರೆಗಿನ ವಿದ್ಯಾಭ್ಯಾಸದ ಖರ್ಚು ವೆಚ್ಚವನ್ನು ತಾವೇ ಭರಿಸುವುದಾಗಿ ಹೇಳಿದರು. ಸುಂದರ ನಗುವಿನ ಪುಟ್ಟ ಒಡತಿ ಇದೀಗ ಅಲ್ಬಾನಿ ಬ್ರೆಡ್ ನ ಪ್ರಚಾರ ರಾಯಭಾರಿಯಾಗಿದ್ದು

ಒಂದು ಪುಟ್ಟ ನಗು ಏನೆಲ್ಲಾ ಅದ್ಭುತಗಳನ್ನು ಸಾಧಿಸಬಹುದು ಎಂಬುದಕ್ಕೆ ಉದಾಹರಣೆಯಾಗಿ ನಿಂತಿದ್ದಾಳೆ. ಬದುಕಿನ ವೈಚಿತ್ರಗಳೇ ಹೀಗೆ ಅಲ್ಲವೇ ಸ್ನೇಹಿತರೆ?

"ಸ್ಮೈಲ್ ಇಸ್ ದಿ ಓನ್ಲಿ ಆರ್ನಮೆಂಟ್ ದಟ್ ಕಾಸ್ಟ್ ನಥಿಂಗ್ ಬಟ್ ವಿನ್ಸ್ ಎವರಿಥಿಂಗ್" ಎಂಬ ಮಾತನ್ನು ನಾವಿಲ್ಲಿ ನೆನೆಯಬಹುದು. ನಗೆ ಎಂಬ ಆಭರಣವನ್ನು ಧರಿಸಲು ನಾವು ಏನೇನು ಖರ್ಚು ಮಾಡಬೇಕಾಗಿಲ್ಲ ಆದರೆ ಏನೆಲ್ಲವನ್ನು ಗಳಿಸಬಹುದು ಎಂಬ ಮಾತು ಪುಟ್ಟ ಬಾಲಕಿಯ ವಿಷಯದಲ್ಲಿ ಅಕ್ಷರಶಹ ನಿಜವಾಗಿದೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಒಡೆದು ಹೋದ ಮನಗಳನ್ನು ಒಂದುಗೂಡಿಸುವಲ್ಲಿ

ನಗೆಯು ಫೆವಿಕಾಲ್ನಂತೆ ಕೆಲಸ ಮಾಡುತ್ತದೆ. ಇಬ್ಬರು ಸಂಪೂರ್ಣ ಅಪರಿಚಿತರಲ್ಲಿ ಪರಿಚಿತ ಭಾವವನ್ನು ಸೃಷ್ಟಿಸಲು ನಗೆಯ ಮ್ಯಾಜಿಕ್ ಸಾಕು. ಕಡು ಕಷ್ಟದ ಗಳಿಗೆಗಳಲ್ಲಿ ತಿಳಿ ಹಾಸ್ಯದ ಬೆಳಕು ಮುಖದಲ್ಲಿ ಮಂದಹಾಸವನ್ನು ತರಬಲ್ಲದು. ಗಂಡ ಮಕ್ಕಳ ತಮಾಷೆಗೆ ನಸು ಮುನಿಸಿಕೊಂಡ ಅಮ್ಮನ ಮುಖದಲ್ಲಿ ಪ್ರೀತಿಯ ಮಾತೊಂದು ನಗೆ ತರಿಸಬಲ್ಲದು.ಎಂತದ್ದೇ ಘನ, ಗಂಭೀರ ವಿಷಯಗಳನ್ನು ಚರ್ಚಿಸುವಾಗಲೂ ಚತುರ ಮಾತಿನ ಪುಟ್ಟ ಚಟಾಕಿ ನಗೆಯುಕ್ಕಿಸಿ ವಾತಾವರಣವನ್ನು ಹಗುರಗೊಳಿಸಬಲ್ಲದು .ಮಗುವಿನ ಮುಗ್ಧ ಸುಂದರ ನಗು ಮನೋಲ್ಲಾಸಕ್ಕೆ ಕಾರಣವಾದರೆ ಪ್ರಕೃತಿಯ ಸುಂದರ ಚಿತ್ರಣ ಮನಕ್ಕೆ ಆಹ್ಲಾದವನ್ನು ನೀಡಿ ತುಟಿಯನ್ನು ಅರಳಿಸಬಲ್ಲದು.

ಕೋಪಗೊಳ್ಳಲು ಮನುಷ್ಯನ 52 ಸ್ನಾಯುಗಳು ಗಂಭೀರವಾಗಿ ಕಾರ್ಯನಿರ್ವಹಿಸಿದರೆ ನಗಲು ಕೇವಲ 14 ಸ್ನಾಯುಗಳು ಸಾಕು ಎಂಬ ವೈಜ್ಞಾನಿಕ ಸತ್ಯವು ನಗೆಯ ಮಹತ್ವವನ್ನು ನಮಗೆ ತಿಳಿಸಿಕೊಡುತ್ತದೆ. ನಗೆ ಮನದ ಮಲಿನತೆಯನ್ನು ಕಳೆಯುತ್ತದೆ.

**ನಗೆಯಲ್ಲಿಯೂ ಹಲ ವಿಧಗಳು.**

ಕೊಂಚವೇ ತುಟಿಯನ್ನು ಬಿರಿದು ನಕ್ಕ ನಗು ನಸುನಗು, ಮಂದಹಾಸ ಎಂದು ಕರೆಸಿಕೊಂಡರೆ, ಜೋರಾದ ನಗುವನ್ನು ಸಂತಸದ ನಗೆ ಎಂದು ಕರೆಯಬಹುದು. ಬಾಯಿ ತೆರೆದು ಗಹಗಹಿಸಿ ನಕ್ಕರೆ ಅಟ್ಟಹಾಸದ ನಗೆ ಎಂದೂ,ತುಟಿಯನ್ನು ಓರೆಗೊಳಿಸಿ ನಕ್ಕರೆ ವ್ಯಂಗ್ಯದ ನಗು ಎಂದು ಹೇಳಬಹುದು, ಬೇರೆಯವರನ್ನು ಹಾಸ್ಯ ಮಾಡಿ ಅಣಕಿಸಿ ನಗುವುದನ್ನು ಕುಹಕದ ನಗು ಎಂದು ಹೇಳಿದರೆ ತುಟಿಯನ್ನು ಬಿರಿಯದೆ ಹೋದರೂ ಕೇವಲ ಕಣ್ಣ ನೋಟದಲ್ಲಿ ಭಾವನೆಗಳ ವ್ಯಕ್ತಪಡಿಸುವ ನಗುವನ್ನು ನಿರ್ಲಿಪ್ತ ನಗು ಎಂದು ಹೇಳಬಹುದು. ಪರಿಚಯವಾದ ಕೂಡಲೇ ಕೈ ಕುಲುಕಿ ಮುಖದಲ್ಲಿ ನಗೆಯನ್ನು ಅರಳಿಸುವ ಬಗೆಯನ್ನು ಸೌಹಾರ್ದದ ನಗೆ ಎಂದು ಪರಿಗಣಿಸಿದರೆ,ಕಣ್ಣಂಚಲ್ಲಿ ನೀರು ಮುಖದಲ್ಲಿನ ನಗುವನ್ನು ಆನಂದ ಭಾಷ್ಪ, ಸಂತಸದ ಕಣ್ಣೀರು ಎಂದು ವರ್ಣಿಸುತ್ತಾರೆ. ಬಹುಶಹ ಮನುಷ್ಯ ಜೀವಿತದ ಅತ್ಯಂತ ಸುಂದರವಾದ ಆನಂದಭಾಷ್ಪದ ಗಳಿಗೆಗಳು ಕೆಲವೇ ಇದ್ದರೂ ಕೂಡ ಅವುಗಳು ತರುವ ಸಂತಸ ಚಿರಕಾಲ ಮನದಲ್ಲಿ ಮನೆ ಮಾಡುತ್ತವೆ.

ತಮ್ಮ ಹಳೆಯ ಕಷ್ಟದ ದಿನಗಳನ್ನು ನೆನೆದು, ಬದುಕು ಒಡ್ಡಿದ ಬಡತನದ, ಸಂಕಷ್ಟದ ಸವಾಲುಗಳನ್ನು ತಾವು ಎದುರಿಸಿದ ಪರಿಯನ್ನು ಹೇಳುವ ವೃದ್ಧರ ಮುಖದಲ್ಲಿ ತೃಪ್ತಿಯ ನಗೆ ಮನೆ ಮಾಡಿರುತ್ತದೆ.

ಮತ್ತೆ ಕೆಲ ಅಜ್ಞಾನಿಗಳು ಬೇರೆಯವರ ಮನ ನೋಯಿಸುವಂತೆ ಮಾತಾಡಿ ಅಣಗಿಸಿ ವ್ಯಂಗ್ಯದ ನಗೆ ಬೀರುತ್ತಾರೆ. ಒಬ್ಬರನ್ನು ನೋಯಿಸಿ ಸಂತಸ ಪಡುವ ಮನಸ್ಥಿತಿ ಒಳ್ಳೆಯದಲ್ಲ.

ನಗೆಯು ನಮ್ಮ ಮೈಮನಗಳಲ್ಲಿನ ಜಡತೆಯನ್ನು ತೊಡೆದು ಹಾಕಿ ಹೊಸ ಉತ್ಸಾಹವನ್ನು ತುಂಬುತ್ತದೆ ಎನ್ನುವ ಕಾರಣಕ್ಕಾಗಿಯೇ ಜನರ ನಾಡಿ ಮಿಡಿತವನ್ನು ಅರಿತ ದೃಶ್ಯ ಮಾಧ್ಯಮಗಳಲ್ಲಿ ಹಾಸ್ಯ ಕಾರ್ಯಕ್ರಮಗಳು ಹರಟೆಗಳು ಪ್ರಸಾರವಾದರೆ, ಆಕಾಶವಾಣಿಗಳು ಕೂಡ ಹಿಂದೆ ಬಿದ್ದಿಲ್ಲ. ಕಳೆದ ಹಲವಾರು ದಶಕಗಳಿಂದ ಉತ್ತಮ ಗುಣಮಟ್ಟದ ಹಾಸ್ಯ ಕಾರ್ಯಕ್ರಮಗಳನ್ನು ಬಾನುಲಿ ಮಾಧ್ಯಮಗಳು ಕೂಡ ಪ್ರಸಾರ ಮಾಡುತ್ತಲೇ ಇವೆ.






ಇನ್ನು ಜಾತ್ರೆ, ಸಮ್ಮೇಳನ ಉತ್ಸವ ಮುಂತಾದ ಕಾರ್ಯಕ್ರಮಗಳಲ್ಲಿ ಉಳಿದೆಲ್ಲ ಕಾರ್ಯಕ್ರಮಗಳು ಒಂದು ತೂಕವಾದರೆ ಹಾಸ್ಯ ಕಾರ್ಯಕ್ರಮಗಳದ್ದೇ ಮತ್ತೊಂದು ತೂಕ.

ರಾಜ ಮಹಾರಾಜರ ಕಾಲದಲ್ಲಿ ರಾಜನ ಆಸ್ಥಾನದಲ್ಲಿ ವಿದೂಷಕರು ಎಂಬ ನಗಿಸುವ ವರ್ಗವೇ ಇತ್ತು. ಬಸವಣ್ಣನವರ ಕಾಲದಲ್ಲಿ ನಗೆ ಮಾರಿ ತಂದೆ ತನ್ನ ಹಾಸ್ಯ ಚಟಾಕಿಗಳಿಂದ ಸ್ವತಹ ದೇವಾನುದೇವತೆಗಳಾದ ಶಿವ ಪಾರ್ವತಿಯರಿಗೆ ನಗೆ ಉಕ್ಕಿಸಿ ತನ್ನ ಕಾಯಕವನ್ನು ನಿರ್ವಹಿಸಿದ ಖ್ಯಾತಿಯನ್ನು ಪಡೆದಿದ್ದಾನೆ. ಸರ್ಕಸ್ಗಳಲ್ಲಿಯೂ ಕೂಡ ಜೋಕರ್ಗಳು ತಮ್ಮ ವಿಭಿನ್ನ ಶೈಲಿಯ ಭಾವ ಭಂಗಿ ಮತ್ತು ಮಾತುಗಳಿಂದ ನಗೆಯನ್ನು ಉಕ್ಕಿಸುತ್ತಾರೆ. ಈ ಹಿಂದೆ ದುಡ್ಡು ಕೊಟ್ಟು ನಗಿಸುವವರನ್ನು ಕರೆಸಿಕೊಳ್ಳುತ್ತಾರೆ ಎಂಬ ವಿಷಯವನ್ನು ಸೋಜಿಗದಂತೆ ನೋಡುತ್ತಿದ್ದ ಜನ ಇದೀಗ ಬದಲಾದ ಕಾಲಘಟ್ಟದಲ್ಲಿ ಕಾಫಿ ಶಾಪ್ಗಳಲ್ಲಿ, ಕಾಕ್ಟೇಲ್ ಬಾರ್ ಗಳಲ್ಲಿ, ಔದ್ಯೋಗಿಕ ಕಾರ್ಯಕ್ರಮಗಳಲ್ಲಿ ಹರಟೆಯ ಮೂಲಕ ನಗೆಯನ್ನು ಉಕ್ಕಿಸುವ ಮಾತಿನ ಮೋಡಿಗಾರರನ್ನು ಕರೆಸಿ ಮನರಂಜನೆ ನೀಡುತ್ತಿದ್ದಾರೆ.

ನಗೆ ಎಂಬುದು ಸಾಂಕ್ರಾಮಿಕ. ಪರಿಚಯವಿರಲಿ ಇಲ್ಲದಿರಲಿ ಮುಗ್ಧವಾದ ನಗೆ ಎಲ್ಲರಲ್ಲಿ ಪಸರಿಸಲಿ ಎಂಬ ಆಶಾಭಾವದೊಂದಿಗೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಸುಮಸೂರ್ಯರ ಬಂಧ




ಎಲ್ಲಿಗೆ ಓಡುವೆ ಸೂರ್ಯ
ಏನುಂಟು ಅವಸರದ ಕಾರ್ಯ
ಮುಳಗಲು ಇರುವುದು ಸಮಯ
ಕಳೆಯುವ ಕ್ಷಣಗಳ ಜೊತೆಯ

ದಳಗಳ ತುದಿಗಿದೋ ನೀನು
ಬಂದಾಗ ಹಿಡಿದಿಹೆ ನಾನು
ಸಂಜೆಗೆ ಕೆಂಪಾಗಿದೆ ಬಾನು
ನನ್ನೊಡೆ ಆಡುವೆ ಏನು

ನಿನ್ನಯ ಬೆಳಕೇ ಆಧಾರ
ನಾ ಹೂವಾಗಿ ಅರಳಲು ಸಾಕಾರ
ನೀಡುವೆ ಶಕ್ತಿಯ ಭರಪೂರ
ನೀನೀರೆ ಕತ್ತಲು ಬಹುದೂರ

–ಚೇತನ ಭಾರ್ಗವ

## ತೆರಿಗೆ ಸಂಗ್ರಹ ಅಭಿಯಾನದಲ್ಲಿ ಜಿಲ್ಲೆಗೆ ಹರಪನಹಳ್ಳಿ ಟಾಪ್

# 2 ದಿನದಲ್ಲಿ 40 ಲಕ್ಷ ರೂ. ಸಂಗ್ರಹ



ಡಿಸೆಂಬರ್ ತಿಂಗಳಲ್ಲಿ ಕಂದಾಯ ವಸೂಲಾತಿ ಮಾಸಾಚರಣೆ ಮಾಡಲಾಗುತ್ತಿದ್ದು, ತೆರಿಗೆ ಸಂಗ್ರಹ ಅಭಿಯಾನದಲ್ಲಿ ಸಾಕಷ್ಟು ಜನ ತೆರಿಗೆ ಕಟ್ಟುತ್ತಿದ್ದಾರೆ. ಪ್ರತಿ ಸೋಮವಾರ ವಿಶೇಷ ಕರ ವಸೂಲಾತಿ ಅಭಿಯಾನ ಮಾಡಲಾಗುತ್ತಿದೆ. ತಮ್ಮ ಸ್ವತ್ತುಗಳಿಗೆ ತೆರಿಗೆ ನೀಡಿದಾಗ, ಮೂಲಭೂತ ಸೌಲಭ್ಯ ಕಲ್ಪಿಸಲು ಅನುಕೂಲವಾಗುತ್ತದೆ. ಜನರು ತೆರಿಗೆ ಪಾವತಿಸಿ ಗ್ರಾ.ಪಂ ಸಬಲೀಕರಣಕ್ಕೆ ಸಹಕರಿಸಿ

– ಚಂದ್ರಶೇಖರ್ ವೈ.ಎಚ್
ಇಒ, ತಾಲೂಕು ಪಂಚಾಯಿತಿ, ಹರಪನಹಳ್ಳಿ

■ ಹಂಪಿ ಟೈಮ್ಸ್ ಹರಪನಹಳ್ಳಿ

ತಾಲೂಕಿನಲ್ಲಿ ನ. 29, 30 ರಂದು ನಡೆದ ವಿಶೇಷ ತೆರಿಗೆ ವಸೂಲಾತಿ ಅಭಿಯಾನದಲ್ಲಿ ವಿಶೇಷ ಕಾರ್ಯಪಡೆಯಂತೆ ಜಿಲ್ಲಾ ಪಂಚಾಯಿತಿ ಸಿಇಒ ಅವರ ಸೂಚನೆ, ಉಪ ಕಾರ್ಯದರ್ಶಿಗಳ ಮಾರ್ಗದರ್ಶನದಲ್ಲಿ ತಾಲೂಕಿನ ಎಲ್ಲ ಸಿಬ್ಬಂದಿ ಕೈಜೋಡಿಸುವ ಮೂಲಕ ಎರಡೇ ದಿನದಲ್ಲಿ 40 ಲಕ್ಷ ರೂ. ತೆರಿಗೆ ಸಂಗ್ರಹ ಮಾಡಿ ಜಿಲ್ಲೆಯಲ್ಲೇ ಹರಪನಹಳ್ಳಿ ತಾಲೂಕು ಗಣನೀಯ ಸಾಧನೆ ಮಾಡಿದೆ.

**ಹಲುವಾಗಲು ಗ್ರಾ.ಪಂ ಪ್ರಥಮ:** ವಿಶೇಷ ತೆರಿಗೆ ವಸೂಲಾತಿ ಅಭಿಯಾನದಲ್ಲಿ 37 ಗ್ರಾಮ ಪಂಚಾಯಿತಿಗಳ ಪೈಕಿ ಹಲುವಾಗಲು ಗ್ರಾಪಂ 3,00,638 ರೂ. ಸಂಗ್ರಹಿಸಿ ಮೊದಲ ಸ್ಥಾನ ಪಡೆದರೆ, ಕಂಚಿಕೆರೆ 2,53,878 ರೂ. ದ್ವಿತೀಯ ಸ್ಥಾನ, ನಿಚ್ಚವ್ವನಹಳ್ಳಿ 1,93,750 ರೂ.ತೆರಿಗೆ ಸಂಗ್ರಹಿಸಿ ತೃತೀಯ ಸ್ಥಾನ ಪಡೆದಿದೆ. ಇನ್ನು 13 ಗ್ರಾಮ ಪಂಚಾಯಿತಿಗಳಲ್ಲಿ 1 ಲಕ್ಷ ರೂ. ಅಧಿಕ ತೆರಿಗೆ ಸಂಗ್ರಹ ಮಾಡಿ ಸಾಧನೆ ಮಾಡಿದ್ದಾರೆ.

**ಅಧಿಕಾರಿಗಳ ನೇಮಕ:** ತಾಲೂಕಿಗೆ ಒಬ್ಬರಂತೆ ನೋಡಲ್ ಅಧಿಕಾರಿಗಳನ್ನು ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಲೆಕ್ಕಾಧಿಕಾರಿ ಶ್ರೀನಿವಾಸ ಅವರನ್ನು ಹರಪನಹಳ್ಳಿಗೆ ಜಿಪಂ ಸಿಇಒ ನೇಮಕ ಮಾಡಿದ್ದರು. ಹರಪನಹಳ್ಳಿ ತಾಪಂನ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ್ ವೈ.ಎಚ್. ಅವರು ಹೋಬಳಿಗೆ ಒಬ್ಬರಂತೆ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಿ ಆದೇಶ ಮಾಡಿದ್ದರು.
ಕಸಬಾ ಹೋಬಳಿಗೆ ನರೇಗಾ ಸಹಾಯಕ ನಿರ್ದೇಶಕ ಯು.ಎಚ್.ಸೋಮಶೇಖರ್, ತೆಲಿಗಿ ಹೋಬಳಿಗೆ ಪಂಚಾಯತ್ ರಾಜ್ ಸಹಾಯಕ ನಿರ್ದೇಶಕರಾದ ವೀರಣ್ಣ ಲಕ್ಕಣ್ಣನವರ್, ಚಿಗಟೇರಿ ಹೋಬಳಿಗೆ ತಾಲೂಕು ಯೋಜನಾಧಿಕಾರಿ ಎನ್.ವಿ.ನವೀನ್ ಕುಮಾರ್, ಅರಸೀಕೆರೆ ಹೋಬಳಿಗೆ ಸಹಾಯಕ ಲೆಕ್ಕಾಧಿಕಾರಿ ವಿಜಯಕುಮಾರ್ ಅವರನ್ನು ನೇಮಕ ಮಾಡಿದ್ದರೆ, ಇತ್ತ ಪ್ರತೀ ಗ್ರಾಮ ಪಂಚಾಯಿತಿಗೂ ತಾಲೂಕು ಮಟ್ಟದ ಬಿ–ಗ್ರೂಪ್ ಹುದ್ದೆಯ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನು ನೇಮಕಗೊಂಡಿದ್ದರು. ಅಭಿಯಾನದಲ್ಲಿ ಗ್ರಾಪಂ ಪಿಡಿಒ ಹಾಗೂ ಸಿಬ್ಬಂದಿ, ಸ್ವಸಹಾಯ ಸಂಘಗಳ ಸದಸ್ಯರು, ನರೇಗಾ ಕಾಯಕ ಕಾರ್ಮಿಕರು ಪಾಲ್ಗೊಂಡಿದ್ದರು.

**ನೆಟ್ ಬ್ಯಾಂಕಿಂಗ್ ಮೂಲಕ ಪಾವತಿಸಿ:** ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲ ಕರವಸೂಲಿಗಾರರು ಮನೆಮನೆ ಬಂದಾಗ ಅಥವಾ ಆಯಾ ಗ್ರಾಪಂಗಳ ಕಚೇರಿಗೆ ಭೇಟಿ ನೀಡಿದರೂ ತೆರಿಗೆಯನ್ನು ಕಟ್ಟಿಸಿಕೊಳ್ಳಲಾಗುತ್ತಿದೆ. ಇನ್ನು ಜನರ ಅನುಕೂಲಕ್ಕೆ ತಮ್ಮ ಮೊಬೈಲ್ ನಲ್ಲೇ ತೆರಿಗೆ ಪಾವತಿಸಲು ಅವಕಾಶ ಮಾಡಿಕೊಟ್ಟಿದೆ. "ಬಾಪೂಜಿ ಸೇವಾ ಕೇಂದ್ರ" ಮೊಬೈಲ್ ಅಪ್ಲಿಕೇಶನಲ್ಲೇ ನೆಟ್ ಬ್ಯಾಂಕಿಂಗ್ ಮೂಲಕ ಪಾವತಿಸಬಹುದು ಅಥವಾ ಇದೇ ಅಪ್ಲಿಕೇಶನ್ ಮೂಲಕ ಪ್ರಾಪರ್ಟಿ ಐಡಿ ಪಡೆದು ಯುಪಿಐನಲ್ಲಿಯೂ ಪಾವತಿಸಬಹುದು.

## ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಮಕ್ಕಳ ಗ್ರಾಮಸಭೆ ಕಡ್ಡಾಯ




■ ಹಂಪಿ ಟೈಮ್ಸ್ ಕಂಪ್ಲಿ

ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗದಂತೆ ಪ್ರತಿಯೊಬ್ಬ ಅಧಿಕಾರಿ ಎಚ್ಚರಿಕೆವಹಿಸಬೇಕು. ಕಡ್ಡಾಯವಾಗಿ ಮಕ್ಕಳ ಗ್ರಾಮಸಭೆ ನಡೆಸಬೇಕು ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ್ ಕೊಸಂಬೆ ಹೇಳಿದರು.

ಪಟ್ಟಣದ ತಹಶೀಲ್ದಾರ್ ಸಭಾಂಗಣದಲ್ಲಿ ಮಂಗಳವಾರ ರಾಜ್ಯ ಮಕ್ಕಳ ರಕ್ಷಣಾ ಆಯೋಗದಿಂದ ಹಮ್ಮಿಕೊಂಡಿದ್ದ ತಾಲೂಕು ಮಟ್ಟದ ಅಧಿಕಾರಿಗಳಿಗೆ ಒಂದು ದಿನದ ಮಕ್ಕಳ ರಕ್ಷಣೆ ಮತ್ತು ಹಕ್ಕುಗಳ ಅರಿವು ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾನಾಡಿದರು. ಮಕ್ಕಳಸ್ನೇಹಿ ಗ್ರಾಮಪಂಚಾಯಿತಿಗಳಾಗಿ ರೂಪುಗೊಳ್ಳಬೇಕು. ಮಕ್ಕಳ ಹಕ್ಕುಗಳ ರಕ್ಷಣೆಗೆ ಪ್ರತಿ ಅಧಿಕಾರಿ ಶ್ರಮಿಸಬೇಕು ಎಂದರು.

ತಾಪಂ ಇಒ ಆರ್.ಕೆ.ಶ್ರೀಕುಮಾರ್ ಮಾತನಾಡಿ, ಮಕ್ಕಳ ಹಕ್ಕುಗಳ ರಕ್ಷಣೆಯ ಹೊಣೆ ಸರ್ಕಾರ ಮತ್ತು ಕುಟುಂಬದ ಸದಸ್ಯರ ಸಾಮೂಹಿಕ ಜವಾಬ್ದಾರಿಯಾಗಿದೆ. ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಅಧಿಕಾರಿ ವಿಫಲನಾದರೆ ಸಮಸ್ಯೆ ಉದ್ಭವಿಸುತ್ತವೆ. ಅಧಿಕಾರಿಗಳು ಆತ್ಮಸಾಕ್ಷಿಯಾಗಿ ಕೆಲಸ ಮಾಡಬೇಕು ಎಂದರು.

ತಹಶೀಲ್ದಾರ್ ಎಸ್.ಶಿವರಾಜ ಅಧ್ಯಕ್ಷತೆವಹಿಸಿ ಮಾತನಾಡಿ, ತರಬೇತಿಯಲ್ಲಿ ಪಾಲ್ಗೊಂಡ ಅಧಿಕಾರಿಗಳು ಮಕ್ಕಳ ಹಕ್ಕುಗಳ ರಕ್ಷಣೆಯ ಅಂಶಗಳನ್ನು ಅನುಷ್ಠಾನಗೊಳಿಸಬೇಕು ಎಂದರು.

ತಾಪಂ ಇಒ ಆರ್.ಕೆ.ಶ್ರೀಕುಮಾರ್, ಬಿಇಒ ಟಿ.ಎಂ.ಸಿದ್ಧಲಿಂಗಮೂರ್ತಿ, ತಾಲೂಕು ಆರೋಗ್ಯ ಮೇಲ್ವಿಚಾರಣಾಧಿಕಾರಿ ಡಾ.ಜಿ.ಅರುಣ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎಳೆನಾಗಪ್ಪ, ಮಕ್ಕಳ ರಕ್ಷಣಾಧಿಕಾರಿ ಚನ್ನಬಸಪ್ಪ ಪಾಟೀಲ್ ಇತರರು ಮಾತನಾಡಿದರು. ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಎಚ್.ಸಿ. ರಾಘವೇಂದ್ರ ತರಬೇತಿ ನೀಡಿದರು.

## ನಿತ್ಯ ಪಂಚಾಂಗ

ಮಾಸ: ಮಾರ್ಗಶೀರ । ಸಂವತ್ಸರ: ಕ್ರೋಧಿ

**04–12–2024 – ಬುಧವಾರ**

| | |
|---|---|
| ತಿಥಿ | : ತೃತೀಯ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪೂರ್ವಾಷಾಡ |
| ಯೋಗ | : ಗಂಡ |
| ಕರಣ | : ಗರಜ |
| ಸೂರ್ಯೋದಯ | : 06:54:53 |
| ಸೂರ್ಯಾಸ್ತ | : 17:39:40 |
| ರಾಹು ಕಾಲ | : 12:17–13:38 |
| ಯಮಘಂಡ ಕಾಲ | : 08:15–09:36 |
| ಗುಳಿಕ ಕಾಲ | : 10:57–12:17 |

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 03–12–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1629.66 ಅಡಿ |
| ಒಳ ಹರಿವು | 3173 ಕ್ಯುಸೆಕ್ |
| ಹೊರ ಹರಿವು | 5580 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 92.795 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1592.6 ಅಡಿ |
| ಒಳ ಹರಿವು | 933 ಕ್ಯುಸೆಕ್ |
| ಹೊರ ಹರಿವು | 1929 ಕ್ಯುಸೆಕ್ |
| ಸಾಮರ್ಥ್ಯ | 13.341 ಟಿಎಂಸಿ |

## ಪಾರಂ ನಂ.3 ಕೊಡ್ರಿ ಅಧ್ಯಕ್ಷರೇ । ಶೀಘ್ರದಲ್ಲೆ 500 ವಸತಿ ಫಲಾನುಭವಿಗಳ ಆಯ್ಕೆ

# ಮಾದರಿ ಪುರಸಭೆಯನ್ನಾಗಿ ಅಭಿವೃದ್ಧಿಗೊಳಿಸೋಣ

### ಪುರಸಭೆ ಅಧ್ಯಕ್ಷ ಎಂ.ಮರಿರಾಮಣ್ಣ ಆಶಯ । ಜನರಪ ಕಾಳಜಿ ತೋರಿದ ಮಹಿಳಾ ಸದಸ್ಯರು

■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ಅನುದಾನ ಅಗತ್ಯವಾದರೆ ಸಿಎಂ ಸಿದ್ಧರಾಮಯ್ಯ ಅವರ ಬಳಿ ಸರ್ವ ಸದಸ್ಯರೊಂದಿಗೆ ನಿಯೋಗ ತೆರಳಿ ಹೆಚ್ಚು ಅನುದಾನ ತರಲಾಗುವುದು ಎಂದು ಪುರಸಭೆ ಅಧ್ಯಕ್ಷ ಎಂ.ಮರಿರಾಮಣ್ಣ ಆಶಯ ವ್ಯಕ್ತಪಡಿಸಿದರು.

ಪುರಸಭೆ ನೂತನ ಸಭಾಂಗಣದಲ್ಲಿ ನಡೆದ ಮೊದಲ ಸಾಮಾನ್ಯ ಸಭೆಯ ಅಧ್ಯಕ್ಷತೆವಹಿಸಿ ಸೋಮವಾರ ಮಾತನಾಡಿದರು. ಪುರಸಭೆ ಅಧಿಕಾರವಹಿಸಿದ ಬಳಿಕ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈಹಿನ್ನೆಲೆಯಲ್ಲಿಪುರಸಭೆಗೆಬರುವಸಾರ್ವಜನಿಕರೊಂದಿಗೆ ಗೌರವದಿಂದ ವರ್ತಿಸಬೇಕು. ಸಮಸ್ಯೆಗಳಿಗೆ ಕಾರಣ ಹೇಳದೆ ಸ್ಪಂದಿಸಬೇಕು. ಶೀಘ್ರದಲ್ಲೆ ಕೇಂದ್ರ ಮತ್ತು ರಾಜ್ಯ ಸರಕಾರದಿಂದ ಸ್ಲಂ ಬೋರ್ಡ್ ನಿಂದ 500 ಕ್ಕೂ ಮನೆಗಳ ನಿರ್ಮಾಣಕ್ಕೆ ಅನುದಾನ ಒದಗಲಿದ್ದು, ಸ್ಲಂ ಬೋರ್ಡ್ ಅಕಾರಿ ಶಿವಕುಮಾರ್ ಮತ್ತು ತಂಡ ಸರ್ವೆ ನಡೆಸಲಿದೆ.ಅರ್ಹ ಫಲಾನುಭವಿಗಳನ್ನುಪಾರದರ್ಶಕವಾಗಿ ಆಯ್ಕೆ ಮಾಡಲಾಗುವುದು ಎಂದರು.

**ಜನರಪ ಕಾಳಜಿಯ ಮಹಿಳಾ ಸದಸ್ಯರು:**
ಕೆಲವರು ಕೂಡ್ಲಗಿ ರಸ್ತೆಯ ಹಿಂಭಾಗದಲ್ಲಿ ಪುರಸಭೆ ನಿವೇಶವನ್ನು ಅತಿಕ್ರಮಿಸಿ, ಸಾರ್ವಜನಿಕರಿಗೆ ರಸ್ತೆ ಇಲ್ಲದಂತಾಗಿಸಿದ್ದಾರೆ. ಸ್ಥಳಕ್ಕೆ ನಾಳೆಯೆ ಭೇಟಿ ನೀಡಿ ದಾಖಲೆ ಪರಿಶೀಲಿಸಿ ತೆರವು ಕ್ರಮ ಕೈಗೊಳ್ಳಬೇಕು ಎಂದು ಸದಸ್ಯೆ ಕಮಲಮ್ಮ ತಿಳಿಸಿದರು. 17ಮತ್ತು 18 ನೇ ವಾರ್ಡ್‌ನಲ್ಲಿ ಶೌಚಾಲಯ ನಿರ್ಮಿಸಬೇಕು ಎಂದು ಒತ್ತಾಯಿಸಿದರು. ಅಂಗನವಾಡಿ ಕೇಂದ್ರಕ್ಕೆ ಕಟ್ಟಡವಿಲ್ಲದೆ ಕಾಯಕರ್ತೆ ತಮ್ಮ ಮನೆಯಲ್ಲಿ ಪಾಠ ಹೇಳುವಂತಾಗಿದೆ. ಕೂಡಲೆ ಕೇಂದ್ರದ ಕಟ್ಟಡ ನಿರ್ಮಿಸಿ ಎಂದು ಸದಸ್ಯೆ ರೇಷ್ಮಾ ಸಿಖಂದರ್ ಒತ್ತಾಯಿಸಿದಾಗ, ಈ ಕುರಿತಂತೆ ಜಿ.ಪಂ.ಗೆ ಮಾಹಿತಿ ಸಲ್ಲಿಸಲಾಗಿದೆ ಎಂದು ಸಿಡಿಪಿಒ ಇಲಾಖೆ ಮೇಲ್ವಿಚಾರಕಿ ತಿಳಿಸಿದರು. ಸಾರ್ವಜನಿಕರಿಗೆ ಕೇವಲ 1500 ರೂ.ಪಡೆದು ಸಕಿಂಗ್ ವಾಹನ ಸೇವೆ ಒದಗಿಸುವಂತೆ ಕಮಲಮ್ಮ ಸೂಚಿಸಿದಾಗ ಅಧ್ಯಕ್ಷ ಸಹಮತ ವ್ಯಕ್ತಪಡಿಸಿದರು. ಪಟ್ಟಣದ 3ನೇ ವಾರ್ಡ್‌ನ ಬಯಲು ಆಂಜನೇಯ ದೇಗುಲದ ಬಳಿ ಲೈಟಿಂಗ್ ವ್ಯವಸ್ಥೆ, ಶಂಭುಲಿಂಗಪ್ಪ ಶಿಕ್ಷಕರ ಮನೆಯ ಬಳಿಯ ಕಾಯ್ದರಿಸಿದ ನಿವೇಶನದಲ್ಲಿ ಉದ್ಯಾನ ಮಂಜುರಾಗಿದ್ದು ಕೂಡಲೆ ನಿರ್ಮಾಣ ಆರಂಭಿಸಬೇಕು ಎಂದು ಎಚ್. ಎಂ.ಚನ್ನಮ್ಮ ವಿಜಯಕುಮಾರ್ ಕೋರಿದರು. ವಾರ್ಡ್‌ಗಳಲ್ಲಿ ಅಗತ್ಯವಿರುವೆಡೆ ಚರಂಡಿ ನಿರ್ಮಾಣ ಮತ್ತು ಪ್ರಸಿದ್ಧಿ ಶಾಲೆ ರಸ್ತೆ ಅಭಿವೃದ್ಧಿಪಡಿಸುವಂತೆ ಸದಸ್ಯೆ ಮಲ್ಲೇಶ್ವರಿ ಭರತ್, ಹಳೇವೂರಿನ ಪ್ರಾಥಮಿಕ ಶಾಲೆ ಬಳಿ ಸಿಸಿ ಕ್ಯಾಮೆರಾ ಅಳವಡಿಕೆ ಮತ್ತು ಗೊಲ್ಲರ ಓಣಿ ನಿವೇಶನಗಳಿಗೆ ಫಾರಂ ನಂ.3 ನೀಡುವಂತೆ ಸದಸ್ಯೆ ಮಂಗಳಾ ಅಂಬಳಿ ರವೀಂದ್ರ ಗೌಡ ಆಗ್ರಹಿಸಿದರು. ಅಭಿವೃದ್ಧಿಗೆ ಆದ್ಯತೆ ನೀಡುವಂತೆ ಮಂಜುಳಾ ಕೃಷ್ಣನಾಯ್ಕ ಸೂಚಿಸಿದರು



**ಪಾರಂ ನಂ.3 ಕೊಡ್ರಿ ಸ್ವಾಮಿ :** ಸಭೆಯಲ್ಲಿ ಗಂಟೆಗೂ ಹೆಚ್ಚು ಕಾಲ ಫಾರಂ ನಂ.3 ವಿತರಣೆ ಕುರಿತಂತೆ ತೀವ್ರ ಚರ್ಚೆ ನಡೆಯಿತು. ವಿತರಣೆ ಕುರಿತಂತೆ ಸದಸ್ಯರ ನಡುವೆ ತೀವ್ರ ಚರ್ಚೆ ನಡೆಯಿತು. ಪುರಸಭೆ ವ್ಯವಸ್ಥಾಪಕ ಚಂದ್ರಶೇಖರ್ ಇವರು ಭೂ ಪರಿವರ್ತನೆ ಕುರಿತಂತೆ ಹೊಸ ಆದೇಶವನ್ನು ತಿಳಿಸಿದರು. ಆದೇಶದ ಅನ್ವಯ ಕಳೆದ ಬಾರಿಯಂತೆ ಶೇಕಡ 40ರಷ್ಟು ನಿವೇಶನಗಳನ್ನು ಅಭಿವೃದ್ಧಿ ಪೂರ್ವದಲ್ಲಿ ನೀಡಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಸಂಪೂರ್ಣ ಅಭಿವೃದ್ಧಿ ಪಡಿಸಿದ ಬಳಿಕವಷ್ಟೇ ನಿಮ್ಮ ನಿವೇಶನಗಳಿಗೆ ಮಂಜೂರಾತಿ ನೀಡಲಾಗುವುದು ಎಂದರು. ಇದರಿಂದಾಗಿ ತೀವ್ರಕೋಪಗೊಂಡ ಸದಸ್ಯರಾದ ಪವಾಡಿ ಹನುಮಂತಪ್ಪ, ಎಲ್.ಗಣೇಶ್, ಬ್ಯಾಡಗಿ ರಾಜೇಶ್, ಬಿ.ಗಂಗಾಧರ ಇವರು ಸಭೆಯಲ್ಲಿ ನಡವಳಿ ಕೈಗೊಳ್ಳುವ ಮೂಲಕ ಸಭೆಯಲ್ಲೆ ಸಮಸ್ಯೆ ಇತ್ಯರ್ಥಗೊಳಿಸಬೇಕು ಎಂದು ಒತ್ತಾಯಿಸಿದರು. ಕಳೆದ ಹಲವು ವರ್ಷಗಳಿಂದ ವಾಸವಾಗಿರುವವರನ್ನು ಅನಕೃತ ನಿವಾಸಿಗಳೊಂದೆ ನಿರ್ಧರಿಸುವುದು ಬೇಡ ಎಂದು ಸದಸ್ಯರಾದ ಅಜೀಜುಲ್ಲಾ, ದಾದಾಪೀರ್ ಆಗ್ರಹಿಸಿದರು. ಪುರಸಭೆ ವ್ಯಾಪ್ತಿಯಲ್ಲಿ 12 ಸಾವಿರ ನಿವೇಶನಗಳ ಪೈಕಿ7 ಸಾವಿರ ಅನಕೃತ ಎಂಬುದು ತೀವ್ರ ಅನ್ಯಾಯ. ಪುರಸಭೆ ನಿರ್ಣಯಕ್ಕೆ ಕಿಮ್ಮತ್ತಿಲ್ಲವೆ ಎಂದು ಸದಸ್ಯ ನವೀನ್‌ಕುಮಾರ್ ಕಿಡಿಕಾರಿದರು. ವರ್ಷದ ಹಿಂದೆ ಇಲ್ಲದ ಕಾನೂನು ಈಗೇಕೆ ಎಂದು ಸದಸ್ಯ ನಾಗರಾಜ ಜನ್ನು ಕೆಂಡಕಾರಿದರು. ನಿವೇಶನಗಳನ್ನು ಅನಕೃತ ಎನ್ನುವುದಾದರೆ ವಸತಿ ಯೋಜನೆ ಅನುಷ್ಠಾನ ಗೊಳಿಸುವುದು ಹೇಗೆ ಎಂದು ಸದಸ್ಯ ಅಜೀಜುಲ್ಲಾ ಪ್ರಶ್ನಿಸಿದರು. ಕೇವಲ ನೊಂದಾಯಿತ ಆಸ್ತಿಗಳಿಗೆ ಮಾತ್ರ ಫಾರಂ ನಂ.3 ವಿತರಿಸಲಾಗುವುದು ಎಂದು ಕಂದಾಯ ಅಕಾರಿ ಮಾರೆಣ್ಣ ತಿಳಿಸಿದರು. ಸಭೆಯ ನಡವಳಿಯನ್ನು ಜಿಲ್ಲಾಕಾರಿಗೆ ಸಲ್ಲಿಸಲಾಗುವುದು ಎಂದು ಪುರಸಭೆ ಮುಖ್ಯಾಕಾರಿ ತಿಳಿಸಿದರು.

ಸಾರ್ವಜನಿಕ ರುದ್ರಭೂಮಿಗೆ ಜಮೀನು ಒದಗಿಸಬೇಕು ಎಂದು ಸದಸ್ಯ ಬಾಳಪ್ಪ, ಮುಕ್ತಿವಾಹನಕ್ಕೆ ಚಾಲನೆ ನೀಡಬೇಕು ಎಂದು ಸದಸ್ಯ ತ್ಯಾವಣಗಿ ಕೊಟ್ರೇಶ್ ಒತ್ತಾಯಿಸಿದಾಗ ಈಗಾಗಲೆ ಮುಕ್ತಿವಾಹನಕ್ಕೆ ಮಂಜೂರಾತಿ ನೀಡಿದೆ ಎಂದು ಅಧ್ಯಕ್ಷ ಮರಿರಾಮಣ್ಣ ತಿಳಿಸಿದರು.

**ಆರಂಭದಲ್ಲೆ ಸಭೆ ತೊರೆದ ಸದಸ್ಯರು :** ಸಭೆ ಆರಂಭವಾದ ಕೆಲ ನಿಮಿಷಗಳಲ್ಲೆ ಅನಾರೋಗ್ಯದಿಂದಾಗಿ ಪುರಸಭೆ ಉಪಾಧ್ಯಕ್ಷೆ ಅಂಬಿಕಾ ದೇವೇಂದ್ರಪ್ಪ ನಿರ್ಗಮಿಸಿದರು. ಇದರ ಬೆನ್ನಲ್ಲೆ ಚಳಿ ಜ್ವರದಿಂದಾಗಿ ಸದಸ್ಯೆ ಖಾಜಬನ್ನಿ ಅಲ್ಲಾಭಕ್ಷಿ ಸಭೆಯಿಂದ ಹೊರನಡೆದರು.

# ಸಹಕಾರ ಚುನಾವಣೆಗಳು ನಾಯಕತ್ವ ಗುಣಬೆಳೆಸಲು ಸಹಕಾರಿ

### ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಅಭಿಮತ । ಸಹಕಾರ ಸಂಘಗಳ (ಸೊಸೈಟಿ) ಚುನಾವಣೆ ಪೂರ್ವಭಾವಿ ಸಭೆ

■ ಹಂಪಿ ಟೈಮ್ಸ್ ಹರಪನಹಳ್ಳಿ

ಸ್ಥಳೀಯ ಸಮಸ್ಯೆಗಳ ಅರಿವು ಪಕ್ಷದ ಕಾರ್ಯಕರ್ತರ ಜವಾಬ್ದಾರಿ, ಸಮಾಜಿಕ ನ್ಯಾಯವನ್ನು ಒದಗಿಸಲು ಸಹಕಾರ ಸಂಘಗಳ ಚುನಾವಣೆ ಸಹಕಾರಿ ಯಾಗಲಿದೆ ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿ ಕಾರ್ಜುನ ಹೇಳಿದರು.

ಪಟ್ಟಣದ ಕಾಶಿಸಂಗಮೇಶ್ವರ ಬಡಾವಣೆಯಲ್ಲಿರುವ ಕಾಂಗ್ರೆಸ್ ಪಕ್ಷದ ಕಛೇರಿಯಲ್ಲಿ ಮಂಗಳವಾರ ಪ್ರಸ್ತುತ ನಡೆಯುತ್ತಿರುವ ಸಹಕಾರ ಸಂಘಗಳ (ಸೊಸೈಟಿ) ಚುನಾವಣೆಗೆ ಸಂಬಂಧಿಸಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತ ನಾಡಿದ ಅವರು, ತಳಮಟ್ಟದ ಕಾರ್ಯ ಕರ್ತರು ಬೆಳೆಯಲು ಹಾಗೂ ನಾಯಕತ್ವ ಗುಣಗಳನ್ನು ಬೆಳಸಿಕೊಳ್ಳಲು ಈ ಚುನಾವಣೆ ಆಧಾರವಾಗಿದೆ. ಕಿತ್ತಾಟವಾಡದೇ ಒಗ್ಗಟ್ಟಿನಿಂದ ಸೋಸೈಟಿಗಳ ಸಮಗ್ರ ಅಭಿವೃದ್ಧಿಗೆ ಶ್ರಮಿಸಲು ಸೂಕ್ತ ವ್ಯಕ್ತಿಗಳನ್ನು ಆಯ್ಕೆಮಾಡಬೇಕು ಎಂದು ಕಿವಿಮಾತು ಹೇಳಿದರು.

ತಾಲೂಕನ್ನು ಎಲ್ಲಾ ಕ್ಷೇತ್ರದಲ್ಲೂ ನಂ. 1 ಸ್ಥಾನ ಪಡೆಯಲು ಹಾಗೂ ಮಾದರಿಯನ್ನಾಗಿ ಮಾಡಲು ಪ್ರಮಾಣಿಕ ಪ್ರಯತ್ನ ಮಾಡುತ್ತಿರುವೆ. ನೀಲಗುಂದ ಚಿಗಟೇರಿ ಗ್ರಾಮಗಳ ರಸ್ತೆ ಅಭಿವೃದ್ಧಿಗೆ, ಸೋಲಾರ ಪ್ಲಾಂಟ್, ಶಾಲಾ ಕೊಠಡಿಗಳ ನಿರ್ಮಾಣ, ಸ್ಮಾರ್ಟ್ ಕ್ಲಾಸ್, ಕ್ರೀಡಾ ಸಾಮಗ್ರಿಗಳ ಖರೀದಿ ಸರಿಸುಮಾರು 16 ಕೋಟಿ ಅನುದಾನ ಬಿಡುಗಡೆಯಾಗಿದ್ದು, ನಾಳೆಯಿಂದ ಭೂಮಿ ಪೂಜೆ ಮುಖಾಂತರ ಕಾಮಗಾರಿಗಳು ಚಾಲನೆಗೊಳ್ಳಲಿವೆ ಎಂದರು.



ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಹಾಗೂ ಕಾಂಗ್ರೆಸ್ ಮುಖಂಡ ಮಹಾಭಲೇಶ್ವರಗೌಡ ಮಾತನಾಡಿ, ಕಾಂಗ್ರೆಸ್ ಪಕ್ಷದ ಮುಖಂಡರು ಶಿಸ್ತಿನ ಸಿಪಾಯಿಗಳಂತೆ ಕೆಲಸ ನಿರ್ವಹಿಸಬೇಕು. ನಡೆನುಡಿ ಪ್ರೀತಿಯಿಂದ ಕಾಂಗ್ರೆಸ್ ಮನೋಭಾವ ವನ್ನು ಬೆಳಸಿಕೊಂಡು ಚುನಾವಣೆ ಎದುರಿಸಬೇಕು. ಈ ಚುನಾವಣೆ ಮುಂಬರುವ ತಾಲೂಕು ಹಾಗೂ ಜಿಲ್ಲಾ ಪಂಚಾಯ್ತಿ ಚುನಾವಣೆಗೆ ಮುನ್ನುಡಿ ಬರೆಯಲಿದೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ ಮಾತನಾಡಿ, ಶಾಸಕರ ಹಾಗೂ ಪಕ್ಷದ ಮುಖಂಡರ ಮಾರ್ಗದರ್ಶನದಲ್ಲಿ ಸ್ಥಳೀಯ ಸಂಘ ಸಂಸ್ಥೆಗಳ ಚುನಾವಣೆಗಳನ್ನು ಎದುರಿಸಲು ಪಕ್ಷದ ಕಾರ್ಯ ಕರ್ತರು ಒಗ್ಗಟ್ಟಾಗಿ ಕೆಲಸ ಮಾಡಲಿದ್ದಾರೆ. ತಾಲ್ಲೂಕಿನ 14 ಸೋಸೈಟಿ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದ ಬೆಂಬಲಿತ ಅಭ್ಯಾರ್ಥಿಗಳು ಗೆಲವು ಸಾಧಿಸಲಿದ್ದಾರೆ. 2023ರ ವಿಧಾನ ಸಭಾ ಚುನಾವಣೆಯಲ್ಲಿ ಕಾರ್ಯಕರ್ತರ ಹಾಗೂ ಮುಖಂಡರ ಒಗ್ಗೂಡಿದ ಫಲವಾಗಿ ಪಕ್ಷೇತರ ಅಭ್ಯಾರ್ಥಿಯಾಗಿ ಶಾಸಕಿ ಎಂ.ಪಿ.ಲತಾ ಮಲ್ಲಿ ಕಾರ್ಜುನ ಗೆಲವು ಸಾಧಿಸಲು ಕಾರಣವಾಯಿತ್ತು. ಈ ಚುನಾವಣೆ ಮುಂಬರುವ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯ್ತಿ ಚುನಾವಣೆಗೆ ಭದ್ರವಾದ ಅಡಿಗಲ್ಲು ಆಗಲಿದೆ ಎಂದರು.

ಪಕ್ಷದ ಮುಖಂಡರಾದ ವೈ.ಕೆ.ಬಿ.ದುರುಗಪ್ಪ, ಡಿ.ಅಬ್ದುಲ್ ರೆಹಮಾನಸಾಬ್, ಟಿ.ವೆಂಕಟೇಶ್, ಜಾವೀದ್, ಕಂಚಿಕೇರಿ ಜಯಲಕ್ಷ್ಮಿ, ವಿಜಯಕುಮಾರ ಮಾತನಾಢಿದರು.

ತಾಲೂಕು ಪಂಚಾಯಿತಿ ಮಾಜಿ ಸದಸ್ಯರಾದ ಹುಲಿಕಟ್ಟಿ ಚಂದ್ರಪ್ಪ, ಮೈದೂರು ಒ.ರಾಮಪ್ಪ, ಪುರಸಭೆ ಅಧ್ಯಕ್ಷೆ ಫಾತಿಮಾಬಿ, ಉಪಾಧ್ಯಕ್ಷ ಕೊಟ್ರೇಶ್, ಸದಸ್ಯರಾದ ಗೊಂಗಡಿ ನಾಗರಾಜ, ಹೆಚ್.ವಸಂತ ಲಾಟಿ ದಾದಾಪೀರ್, ವಾಗೀಶ್ ನೀಲಗುಂದ, ಎನ್.ಮಜ್ಜಿದ್, ಇರ್ಷಾದ್, ನಾಗರಾಜ ವಾಲ್ಮೀಕಿ, ಗೋಲ್‌ಡನ್ ಬೀಡಿ ಜಾವೀದ್, ಜಿ.ಟಿ.ಮಹೇಶ್ ತೆಲಗಿ, ವನಜಾಕ್ಷಮ್ಮ, ನೇತ್ರಾವತಿ, ಸುಮಾ ಜಗದೀಶ್ ಹಾಗೂ ಇತರರು ಭಾಗವಹಿಸಿದ್ದರು.

## ಅಡತಡೆ ಮೆಟ್ಟಿ ನಿಲ್ಲುವುದು ಜೀವನದ ಮುಖ್ಯ ಗುರಿ : ಸಿದ್ರಾಮೇಶ್ವರ

■ ಹಂಪಿ ಟೈಮ್ಸ್ ಕೊಪ್ಪಳ

ಅಡತಡೆ ಮತ್ತು ಸಮಸ್ಯೆಗಳನ್ನು ಮೆಟ್ಟಿ ನಿಲ್ಲುವುದು ಜೀವನದ ಮುಖ್ಯ ಗುರಿಯಾಗಿದೆ ಎಂದು ಕೊಪ್ಪಳ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಹೇಳಿದರು.

ಅವರು ಮಂಗಳವಾರ ನಗರದ ತಾಲೂಕು ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ವಿವಿಧ ಇಲಾಖೆಗಳು ಮತ್ತು ವಿಕಲಚೇತನರ ಒಕ್ಕೂಟ ಹಾಗೂ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ನಡೆದ ವಿಶ್ವ ವಿಕಲಚೇತನರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.ವಿಶ್ವ ವಿಕಲಚೇತನ ದಿನಾಚರಣೆ ಅಂಗವಾಗಿ ವಿಕಲಚೇತನರು ವಿವಿಧ ಕಾರ್ಯಕ್ರಮ ಮತ್ತು ಚಟುವಟಿಕೆಗಳನ್ನು ಕ್ರಿಯಾಶೀಲರಾಗಿ ಭಾಗವಹಿಸುವ ಮೂಲಕ ಮುನ್ನಲೆಗೆ ಬರಬೇಕು. ಸಾಮಾನ್ಯರಲ್ಲಿ ಇಲ್ಲದಂತಹ ಚೇತನ ಅಂದರೆ ಶಕ್ತಿ, ಸಾಮರ್ಥ್ಯ ವಿಶೇಷಚೇತನರಲ್ಲಿದೆ. ವೈಯಕ್ತಿಕ ವೈಪಲ್ಯಗಳು ವೈಯಕ್ತಿಕ ಏಳಿಗೆ ಕಾರಣವಲ್ಲ. ಎಲ್ಲರ ಜೀವನದಲ್ಲಿ ಅಡೆತಡೆಗಳು, ಮಾನಸಿಕತೆ ಸಹಜವಾಗಿರುತ್ತವೆ. ಈ ಎಲ್ಲಾ ಸಮಸ್ಯೆಗಳನ್ನು ಮೆಟ್ಟಿ ನಿಲ್ಲುವುದು ಜೀವನದ ಉದ್ದೇಶವಾಗಿದೆ. ನಿಶ್ಚಿತ ಗುರಿಯನ್ನು ಹೊಂದಿ ನಿರಂತರ ಪ್ರಯತ್ನದಿಂದ ಅಂತಿಮ ಗುರಿಯನ್ನು ತಲುಪಲು ಸಹಾಯಕವಾಗುತ್ತದೆ. ವಿವಿಧ ಕ್ಷೇತ್ರದಲ್ಲಿ ವಿಕಲಚೇತನರ ಸಾಧನೆ ಮಾಡಿದ್ದಾರೆ ಎಂದು ಹೇಳಿದರು.

ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್ ಇತರ ಅಧಿಕಾರಿಗಳು ಹಾಗೂ ಜಿಲ್ಲೆಯ ವಿಶೇಷಚೇತನ ಶಾಲಾ ಮಕ್ಕಳು ಉಪಸ್ಥಿತರಿದ್ದರು.



Grow Your Business With Us

S.M.Traders & Services

Authorised Distributor for ATLAS COPCO Portable Screw Air Compressors for North Karnataka

Water Well and Non Water Well Applications

web: www.smtradersandservices.com

M: 9686663125 - 9686663132

Head Office- Hospet, Vijayanagara district, Karnataka | Branch office 1- Ilkal, Bagalkot district, Karnataka | Branch office 2- Vijayapura, Karnataka

# ಜವಳಿ ಕ್ಷೇತ್ರದ ಸಣ್ಣ, ಅತಿಸಣ್ಣ ಘಟಕಗಳಿಗೆ ಶೇ.75 ಸಹಾಯಧನ

■ ಹಂಪಿ ಟೈಮ್ಸ್ ಹೊಸಪೇಟೆ

ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ 2024–25ನೇ ಸಾಲಿನ ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಕ್ಕೆ ಸೇರಿದ ವೈಯಕ್ತಿಕ ಫಲಾನುಭವಿ, ಪಾಲುದಾರಿಕೆ ಸಂಸ್ಥೆ, ಕಂಪನಿ, ಜವಳಿ ಸಹಕಾರಿ ಸಂಘ, ಸಂಸ್ಥೆಗಳು ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿಸಣ್ಣ ಘಟಕಗಳನ್ನು ಪ್ರಾರಂಭಿಸಲು ಶೇ.75 ರಷ್ಟು ಬಂಡವಾಳ ಹೂಡಿಕೆ ಸಹಾಯಧನ ಒದಗಿಸಲಾಗುವುದು.

ಜಿಲ್ಲೆಗೆ ಭೌತಿಕ 3 ಹಾಗೂ ಗಿರಿಜನ ಉಪ ಯೋಜನೆಯಡಿ ಭೌತಿಕ 1 ಹೀಗೆ ಒಟ್ಟು 4 ಭೌತಿಕ ಗುರಿಯನ್ನು ನಿಗದಿಪಡಿಸಲಾಗಿದ್ದು, ಸಣ್ಣ ಮತ್ತು ಅತಿಸಣ್ಣ ಘಟಕಗಳನ್ನು ಸ್ಥಾಪಿಸಲು ಆಸಕ್ತ ಉದ್ದಿಮೆದಾರರು ಪೂರ್ಣ ಪ್ರಮಾಣದ ದಾಖಲಾತಿಗಳೊಂದಿಗೆ ಡಿಸೆಂಬರ್ 20 ರ ಒಳಗಾಗಿ ಪ್ರಸ್ತಾವನೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರವರ ಕಚೇರಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಬಳ್ಳಾರಿ, ನೂತನ ಜಿಲ್ಲಾಡಳಿತ ಭವನ, ಎ ಬ್ಲಾಕ್, ಮೊದಲನೇ ಮಹಡಿ, ಕೊಠಡಿ ಸಂಖ್ಯೆ:29, ಅನಂತಪುರ ರಸ್ತೆ, ಬಳ್ಳಾರಿ, ಅಥವಾ ದೂರವಾಣಿ ಸಂಖ್ಯೆ: 08392–266075 ಗೆ ಸಂಪರ್ಕಿಸಬಹುದಾಗಿದೆ ಎಂದು ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶ್ವ ವಿಕಲಚೇತನರ ದಿನಾಚರಣೆ | ವಿಶೇಷಚೇತನರ ಮಾಹಿತಿ ನಿರ್ವಹಣಾ ಸಾಫ್ಟ್‌ವೇರ್‌ಗೆ ಚಾಲನೆ

# ವಿಶೇಷಚೇತನರಿಗೆ ಸಮಾನ ಅವಕಾಶ ಗುರಿ ಸಾಧನೆಗೆ ಸಂಪೂರ್ಣ ಸಹಕಾರ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿಕೆ | ಸಾಧಕರಾಗಲು ಮಾನಸಿಕವಾಗಿ ಸದೃಢರಾಗಿ

■ ಹಂಪಿ ಟೈಮ್ಸ್ ಹೊಸಪೇಟೆ

ಸಮಾಜದಲ್ಲಿ ವಿಕಲಚೇತನರು ತಮ್ಮದೇ ಆದ ಸಾಮರ್ಥ್ಯ, ಕೌಶಲ್ಯ ಹಾಗೂ ಪ್ರತಿಭೆಗಳ ಮೂಲಕ ಜೀವನದಲ್ಲಿ ಯಶಸ್ಸು ಸಾಧಿಸಿರುವ ಹಲವಾರು ಉದಾಹರಣೆಗಳು ನಮ್ಮ ಕಣ್ಮುಂದಿವೆ. ಅವರು ಕಲ್ಪನೆಗಳಿಗಿಂತಲೂ ಹೆಚ್ಚಾಗಿ ಸಾಧನೆ ಮಾಡಬಲ್ಲರು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ತಾಲೂಕು ಕಾನೂನು ಸೇವಾ ಸಮಿತಿ, ವಿಕಲಚೇತನರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಮತ್ತು ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ನಗರದ ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪ ದಲ್ಲಿ ಸೊಮವಾರ ನಡೆದ ವಿಶ್ವ ವಿಕಲಚೇತನರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವಿಕಲಚೇತನರ ಬಗ್ಗೆ ಇರುವ ಕೀಳರಿಮೆ ನಿವಾರಿಸಿ, ಅವರ ಜೀವನವನ್ನು ಹೆಚ್ಚು ಸುಗಮ ಗೊಳಿಸಲು ನಮ್ಮೆಲ್ಲರ ಸಹಕಾರ ಅಗತ್ಯ. ಇದು ಕೇವಲ ಅವರಿಗೆ ಸವಲತ್ತು ನೀಡುವ ಪ್ರಶ್ನೆಯಲ್ಲ, ಬದಲಾಗಿ ಸಮಾನ ಅವಕಾಶಗಳು ಎಲ್ಲರಿಗೂ ಲಭ್ಯವಾಗಬೇಕು ಎಂಬ ಸಿದ್ಧಾಂತವನ್ನು ಬೆಂಬಲಿಸುವ ಕಾರ್ಯವಾಗಿದೆ. ಎಲ್ಲ ರೀತಿಯ ಸಹಾಯ ಸೌಲಭ್ಯವನ್ನು ಜಿಲ್ಲಾಡಳಿತದಿಂದ ಒದಗಿಸಲಾಗುವುದು ಎಂದು ತಿಳಿಸಿದರು.




ಇದೇ ಸಂದರ್ಭದಲ್ಲಿ ವಿಶೇಷಚೇತನರ ಮಾಹಿತಿ ನಿರ್ವಹಣೆ ವ್ಯವಸ್ಥೆಯ ಸಾಫ್ಟ್‌ವೇರ್ ಚಾಲನೆ ನೀಡಲಾಯಿತು. ಅರ್ಹರಿಗೆ ವಿವಿಧ ಸಲಕರಣೆಗಳ ಹಾಗೂ ಕಿಟ್‌ಗಳನ್ನು ಜಿಲ್ಲಾಧಿಕಾರಿ ವಿತರಿಸಿದರು.

> **ವಿಶೇಷಚೇತನ ವ್ಯಕ್ತಿ ಕೂತಿದ್ದ ವ್ಹೀಲ್ ಚೇರನ್ನು ಸ್ವತಃ ಜಿಲ್ಲಾಧಿಕಾರಿ ಮುಂದಿನ ಸಾಲಿನವರೆಗೆ ತಳ್ಳಿ ಕೊಂಡು ಹೋಗಿ ಕಾರ್ಯಕ್ರಮ ವೀಕ್ಷಣೆಗೆ ಸಮಾನ ಅವಕಾಶ ಕಲ್ಪಿಸಿದರು.**

**ಸಾಧಕರಿಗೆ ಸನ್ಮಾನ:** ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಂಜುನಾಥ, ಲಕ್ಷ್ಮೀ, ಶರಣೇಶ ಕೆ.ಎಂ., ತರುಣ್, ವಸಂತ್ ಕುಮಾರ, ಬಾಣದ ಗಂಗಮ್ಮ, ಹೊಸೂರಪ್ಪ, ಟಿ.ತಿಮ್ಮಣ್ಣ, ಎಸ್.ಜಿ.ಶಾರದ ಮತ್ತು ಪೂಜಾರ್ ದೀಪ ಇವರಿಗೆ ಇದೇ ವೇಳೆ ಸನ್ಮಾನಿಸ ಲಾಯಿತು.

ನಗರದಲ್ಲಿ ಪುಟ್ಟರಾಜ ಗವಾಯಿಗಳ ಭಾವಚಿತ್ರ ಮೆರವಣಿಗೆ ನಡೆಯಿತು. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಅವಿನಾಶ ಲಿಂಗ ಎಸ್ ಗೋಟಖಿಂಡಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸುಭದ್ರದೇವಿ, ತಾಲೂಕು ಆಡಳಿತದ ಶಿರಸ್ತೆದಾರ್ ಶಿವರತ್ನಮ್ಮ ಹಾಗೂ ಅಧಿಕಾರಿಗಳು, ಸಿಬ್ಬಂದಿ ಮತ್ತು ವಿಶೇಷಚೇನತರು, ಇತರರಿದ್ದರು.


# ವಿಶ್ವ ಪರಂಪರೆ ರಾಜ್ಯಮಟ್ಟದ ಛಾಯಾಗ್ರಹಣ ಸ್ಪರ್ಧೆ ಶಿಕ್ಷಕ ಸಿ.ಎನ್.ಸೋಮೇಶಪ್ಪ ತೆಗೆದ ಹಂಪಿ ಸ್ಮಾರಕ ಚಿತ್ರಕ್ಕೆ ಪ್ರಥಮ ಸ್ಥಾನ

■ ಹಂಪಿ ಟೈಮ್ಸ್ ಹೊಸಪೇಟೆ

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮತ್ತು ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್, ಮೈಸೂರು ಇವರ ಸಂಯುಕ್ತಾಶ್ರ ಯದಲ್ಲಿ "ವಿಶ್ವ ಪರಂಪರೆ ಸಪ್ತಾಹದ" ಪ್ರಯುಕ್ತ ವಿಶ್ವ ಪರಂಪರೆ ತಾಣಗಳ ಬಗ್ಗೆ ನ. 22, ಮತ್ತು 23 ರಂದು ರಾಜ್ಯ ಮಟ್ಟದ ಛಾಯಾಗ್ರಹಣ ಸ್ಪರ್ಧೆ ಮೈಸೂರಿನಲ್ಲಿ ನಡೆಯಿತು.

ಈ ಸ್ಪರ್ಧೆಯಲ್ಲಿ ಹಡಗಲಿ ತಾಲೂಕಿನ ವಿಕೆಕೆ ಕೆಪಿಎಸ್ ಪ್ರೌಢಶಾಲಾ ವಿಭಾಗ ಹಿರೇಹಡಗಲಿಯ ಕನ್ನಡ ಶಿಕ್ಷಕ, ಪಕ್ಷಿ ತಜ್ಞ ಸೋಮೇಶಪ್ಪ ಸಿ ಎನ್ ಇವರು ತೆಗೆದ ಹಂಪಿಯ ವಿಜಯವಿಠಲ ದೇವಾಲಯದ ಸಂಗೀತದ ಸ್ವರಗಳನ್ನು ಹೊರಡಿಸುವ ಕಲ್ಲಿನ ಕಂಬದ ನಯನ ಮನೋಹರವಾದ ಛಾಯಾಚಿತ್ರ ಪ್ರಥಮ ಸ್ಥಾನವನ್ನು ಪಡೆದಿದೆ ಎಂದು ಶಿಕ್ಷಕ ಸೋಮೇಶಪ್ಪ ತಿಳಿಸಿದ್ದಾರೆ.






ಸುದ್ದಿ & ಜಾಹೀರಾತಿಗಾಗಿ ಸಂಪರ್ಕಿಸಿ: 9448633038

ಹಂಪಿ ಟೈಮ್ಸ್

ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ

# SSLC ಈ ಬಾರಿ ಫಲಿತಾಂಶ ನಮ್ಮದೆ

## 10ನೇ ತರಗತಿ ವಿದ್ಯಾರ್ಥಿಗಳಿಗೆ ವಿಜ್ಞಾನ ಚಿತ್ರ ಸ್ಪರ್ಧೆ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಲು ಒಂದು ಉತ್ತಮ ಅವಕಾಶ!


ವಿಜ್ಞಾನ ಕಲಿಕೆಯು ಕೇವಲ ಪಠ್ಯಪುಸ್ತಕ ಓದುವುದು ಮತ್ತು ಪರೀಕ್ಷೆ ಬರೆಯುವುದಕ್ಕೆ ಸೀಮಿತವಲ್ಲ. ಅದು ಸೃಜನಾತ್ಮಕತೆಯನ್ನು ಬೆಳೆಸುವ ಮತ್ತು ತತ್ವಗಳನ್ನು ತಾತ್ವಿಕವಾಗಿ ಅರ್ಥಮಾಡಿಕೊಳ್ಳುವ ಒಂದು ಪ್ರಕ್ರಿಯೆ. 10ನೇ ತರಗತಿ ವಿದ್ಯಾರ್ಥಿಗಳಿಗೆ, ಪರೀಕ್ಷೆಯ ಸಿದ್ಧತೆಯನ್ನು ಬೆಂಬಲಿಸಲು ಮತ್ತು ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು **ಹಂಪಿ ಟೈಮ್ಸ್ ಬಳಗ**ದಿಂದ "**ವಿಜ್ಞಾನ ಚಿತ್ರ ಸ್ಪರ್ಧೆ**" ಆಯೋಜಿಸಲಾಗಿದೆ.

**-: ಈ ವಾರದ (06-12-2024) ಚಿತ್ರ ಸ್ಪರ್ಧೆ : -**

**ಮನುಷ್ಯನ ಹೃದಯದ ಛೇದ ನೋಟದ ಅಂದವಾದ ಚಿತ್ರವನ್ನು ಬಿಡಿಸಿ ಭಾಗಗಳನ್ನು ಗುರುತಿಸಿ?**

### ಸಾಮಾನ್ಯ ಸೂಚನೆಗಳು

1. ವಿದ್ಯಾರ್ಥಿಯು 2023-24 ಶೈಕ್ಷಣಿಕ ಸಾಲಿನಲ್ಲಿ 10ನೇ ತರಗತಿ ವಿದ್ಯಾಭ್ಯಾಸ ಮಾಡುತ್ತಿರಬೇಕು.
2. ಶಿಕ್ಷಕರ/ಶಿಕ್ಷಕಿಯರ ಸಮ್ಮುಖದಲ್ಲಿ ನಿಗದಿತ ಸಮಯ (10 ನಿಮಿಷ) ದಲ್ಲಿ ಶುಕ್ರವಾರದಂದು ಶಾಲೆಯಲ್ಲಿ ಚಿತ್ರವನ್ನು A4 ಹಾಳೆಯ ಅರ್ಧ ಭಾಗದಲ್ಲಿ ಪೆನ್ಸಿಲ್ ನಿಂದ ಬಿಡಿಸಬೇಕು
3. ಆಯಾ ಶಾಲೆಯಲ್ಲಿ ಆಯ್ಕೆಯಾದ ಅತ್ಯುತ್ತಮವಾದ ಒಂದು ಚಿತ್ರ ಮಾತ್ರ ಗುರುಗಳು ಆಯ್ಕೆ ಮಾಡಿ , ಮುಖ್ಯ ಶಿಕ್ಷಕರು/ಶಿಕ್ಷಕರ ಸಹಿಯೊಂದಿಗೆ ವಾಟ್ಸ್‌ಪ್ ನಂಬರಿಗೆ ಕಳುಹಿಸಬೇಕು. ಹೆಚ್ಚಿನ ಚಿತ್ರಗಳಿಗೆ ಅವಕಾಶವಿರುವುದಿಲ್ಲ.
4. ಆಯ್ಕೆಯಾದ ಚಿತ್ರದೊಂದಿಗೆ ವಿದ್ಯಾರ್ಥಿಯ ಹೆಸರು, ಶಾಲೆಯ ವಿಳಾಸ ಮತ್ತು ವಿಜ್ಞಾನ ಮಾರ್ಗದರ್ಶಿ ಶಿಕ್ಷಕರ ಹೆಸರನ್ನು ತಪ್ಪದೇ ಸ್ಪಷ್ಟವಾಗಿ ನಮೂದಿಸಬೇಕು.
5. ತಡವಾಗಿ ಕಳುಹಿಸಿದ ಮತ್ತು ಮಾಹಿತಿ ಕೊರತೆ ಇರುವ ಚಿತ್ರಗಳನ್ನು ಪರಿಗಣಿಸಲಾಗುವುದಿಲ್ಲ.
6. ಆಯ್ಕೆಯಾದ ಅತ್ಯುತ್ತಮವಾದ ಒಂದು ಚಿತ್ರವನ್ನು ಫೋಟೋ ಸಹಿತ ಹಂಪಿ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.
7. ಆಯ್ಕೆ ತಂಡದ ತೀರ್ಮಾನವೇ ಅಂತಿಮ ವಾಗಿರುತ್ತದೆ.
8. ಮಕ್ಕಳ ಉತ್ತಮ ಶೈಕ್ಷಣಿಕ ಫಲಿತಾಂಶಕ್ಕಾಗಿ ಮುಖ್ಯಗುರುಗಳು ಹಾಗೂ ಶಿಕ್ಷಕ ವರ್ಗದವರು ನಮ್ಮೊಂದಿಗೆ ಕೈಜೋಡಿಸುತ್ತೀರೆಂಬ ಸದಾಶಯ ನಮ್ಮದು.



scan to read epaper.hampitimes.com

ವಿ.ಸೂ: ಶುಕ್ರವಾರ ಸಂಜೆ 6 ಗಂಟೆಯೊಳಗೆ ಅತ್ಯುತ್ತಮ ಚಿತ್ರದ ಫೋಟೋ ತೆಗೆದು ಮೊಬೈಲ್ ಸಂಖ್ಯೆ **9972603099** ಗೆ ಕಳುಹಿಸಬೇಕು. ಹೆಚ್ಚಿನ ಚಿತ್ರಗಳಿಗೆ ಅವಕಾಶವಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9448633038

**ಹಂಪಿ ಟೈಮ್ಸ್ ಬಳಗ, ವಿಜಯನಗರ**

visit our website at www.hampitimes.com / epaper.hampitimes.com

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಏಳಿಗೆಗೆ ನೀನೇ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಗಣಿತ

## ಸಂಖ್ಯಾಶಾಸ್ತ್ರ

**ಸರಾಸರಿ :** $= \bar{x} = \frac{\sum f_i x_i}{\sum f_i}$

ಇದರಲ್ಲಿ $f_i$ ಎಂದರೆ ಆವೃತ್ತಿ , $x_i$ ಎಂದರೆ ಮಧ್ಯಬಿಂದು. ಇದು ವರ್ಗಾಂತರ(CI) ನ ಮಧ್ಯಬಿಂದು ಆಗಿದೆ, 1-5 ಇದರಲ್ಲಿ 1 ಕೆಳಮಿತಿ ಮತ್ತು 5ಮೇಲ್ಮಿತಿ ಆಗಿದೆ.

ಮಧ್ಯಬಿಂದು $= \frac{\text{ಕೆಳಮಿತಿ+ಮೇಲ್ಮಿತಿ}}{2}$ ಹೀಗೆ ಕಂಡುಹಿಡಿಯಬೇಕು.

ನಂತರ $f_i$ ಮತ್ತು $x_i$ ಗುಣಿಸಬೇಕು.

ನಂತರ $\sum f_i$ ಆವೃತಿಯ ಎಲ್ಲ ಅಂಶಗಳನ್ನು ಹಾಗೂ $\sum f_i x_i$ ಕೂಡಿಸಿ ಸೂತ್ರದಲ್ಲಿರುವಂತೆ ಭಾಗಿಸಿದರೆ ಬರುವುದೇ ಸರಾಸರಿ

| ವರ್ಗಾಂತರ(CI) | ಆವೃತ್ತಿ(fi) | ಮಧ್ಯಬಿಂದು (xi) | Fixi |
|---|---|---|---|
| 1-5 | 5 | 3 | 15 |
| 5-9 | 4 | 7 | 28 |
| 9-13 | 8 | 11 | 88 |
| 13-17 | 3 | 15 | 45 |
| 17-21 | 2 | 19 | 38 |
| | $\sum f_i = 22$ | | $\sum f_i x_i = 214$ |

**ಸರಾಸರಿ :** $= \bar{x} = \frac{\sum f_i x_i}{\sum f_i}$

**ಸರಾಸರಿ :** $= \bar{x} = \frac{214}{22} = 9.72$

**ಮಧ್ಯಾಂಕ :** $= l + \left(\frac{\frac{n}{2} - c.f.}{f}\right)h$

ಸೂತ್ರದಲ್ಲಿ $l$ ಎಂದರೆ ಮಧ್ಯಾಂಕವಿರುವ ಕೆಳಮಿತಿ $l = 7$,

ಮಧ್ಯಾಂಕ ಕಂಡುಹಿಡಿಯಲು ಆವೃತಿಗಳನ್ನು ಕೂಡಿಸಿ 2ರಿಂದ ಭಾಗಿಸಬೇಕು N = 100 $\frac{N}{2} = \frac{100}{2} = 50$,

c.f. ಮಧ್ಯಾಂಕವಿರುವ ಸಂಚಿತ ಆವೃತ್ತಿಯ ಹಿಂದಿನ ಸಂಚಿತ ಆವೃತ್ತಿ c.f. = 36, ಸಂಚಿತ ಆವೃತ್ತಿ ಕಂಡುಹಿಡಿಯಲು ಮೊದಲನೇ ಆವೃತ್ತಿ ಹಾಗೇ ಬರೆಯಿರಿ(1ನೇ ಸಂಚಿತ ಆವೃತಿ), ನಂತರ ಮೊದಲಿನೇ ಆವೃತಿಗೆ ಎರಡನೇ ಆವೃತ್ತಿ ಕೂಡಿಸಬೇಕು(2ನೇ ಸಂಚಿತ ಆವೃತಿ), ಹೀಗೆ ಮುಂದುವರೆಸಿ

f ಮಧ್ಯಾಂಕವಿರುವ ಆವೃತಿಯಾಗಿದೆ. f = 40, ವರ್ಗಾಂತರ ಗಾತ್ರ (ಮೇಲ್ಮಿತಿ – ಕೆಳಮಿತಿ)h =3 ಸೂತ್ರಕ್ಕೆ ಬಳಸಿ ಲೆಕ್ಕಿಸದರೆ ಮಧ್ಯಾಂಕ ಬರುತ್ತದೆ.

| CI | f | c.f. |
|---|---|---|
| 1-4 | 6 | 6 |
| 4-7 | 30 | 36 |
| 7-10 | 40 | 76 |
| 10-13 | 16 | 92 |
| 13-16 | 4 | 96 |
| 16-19 | 4 | 100 |

ಮಧ್ಯಾಂಕ

$$= l + \left(\frac{\frac{n}{2} - c.f.}{f}\right)h$$
$$= 7 + \left(\frac{50 - 36}{40}\right)3$$
$$= 7 + \frac{14}{40} \times 3$$
$$= 7 + \frac{21}{20}$$
$$= 7 + 1.05$$
$$= 8.05$$

**ಬಹುಲಕ :** $= l + \left(\frac{f_1 - f_0}{2f_1 - f_0 - f_2}\right)h$

ಅತೀ ಹೆಚ್ಚು ಆವೃತ್ತಿ ಹೊಂದಿರುವುದನ್ನು ಗುರ್ತಿಸಿ $f_1$ ಅದೇ ಸಾಲಿನ ಆವೃತಿ, ಅದರ ಹಿಂದಿನ ಆವೃತಿ$f_0$ ಆದರೆ ಮುಂದಿನ ಆವೃತಿ $f_2$ , ಅದೇ ಸಾಲಿನ ಕೆಳಮಿತಿl ಆದರೆ ವರ್ಗಾಂತರ ಗಾತ್ರ h. ಎಲ್ಲವನ್ನು ಸೂತ್ರದಲ್ಲಿ ಹಾಕಿ ಲೆಕ್ಕಿಸಿ.

| ವರ್ಗಾಂತರ | ಆವೃತ್ತಿ |
|---|---|
| 5-15 | 3 |
| 15-25 | 4 |
| 25-35 | 8 |
| 35-45 | 7 |
| 45-55 | 3 |

ಬಹುಲಕ $= l + \left(\frac{f_1 - f_0}{2f_1 - f_0 - f_2}\right)h$

$$= 25 + \left(\frac{8-4}{2 \times 8 - 4 - 7}\right) \times 10$$
$$= 25 + \left(\frac{4}{16 - 11}\right) \times 10$$
$$= 25 + \left(\frac{4}{5}\right) \times 10$$
$$= 25 + 4 \times 2$$
$$= 25 + 8$$
$$= 33$$

ಅದೇ ರೀತಿ ನೀವು ಪ್ರಯತ್ನಿಸಿ

| ವರ್ಗಾಂತರ | 0-10 | 10-20 | 20-30 | 30-40 | 40-50 | 50-60 |
|---|---|---|---|---|---|---|
| ಆವೃತ್ತಿ | 5 | 8 | 20 | 15 | 7 | 5 |

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : **ಎಂ.ಎಸ್.ಮಂಜುನಾಥ,** ಶಿಕ್ಷಕರು, ಸರಕಾರಿ ಪ್ರೌಢಶಾಲೆ ಚಿಲುಗೋಡು ಹಗರಿಬೊಮ್ಮನಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಸಾಯಿಮಣಿ ಪ್ರಕಾಶನ, ಹೊಸಪೇಟೆ